ಮೈಸೂರ ಗೆಜೆಟ್.

ಸಂ. 43.] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 3, ಸ್ಕ 1908.

IIIನೆ ಖಂಡ.

ಲೆಜಿಸ್ಲೆಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗ
ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ಇಸ್ತಿಹಾರ್‌ನಾಮೆ.

ನಂ. 121—ಲೆ. ಕೌ.

ತಾರೀಖು 31ನೆ ಅಕ್ಟೋಬರ್ 1908.

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯಗಳನ್ನು ನಡೆಸುವಬಗ್ಗೆ ಏರ್ಪಡಿಸಿರುವ ನಿಬಂಧನೆಗಳ ಪೈಕಿ 31ನೆಯ ನಿಬಂಧನೆಯ ಮೇರೆಗೆ ಈ ಕೆಳಗಣ ಬಿಲ್ಲು ಯಾ ಮಸೂದೆಗಳನ್ನೂ ಮತ್ತು ಉದ್ದೇಶಗಳ ಮತ್ತು ಕಾರಣಗಳ ವಿವರಣೆಗಳನ್ನೂ ಎಲ್ಲರ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿರುತ್ತದೆ.

ಹುಕುಂ ಖಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

(1) 1903ನೆ ಇಸವಿಯ IIIನೆ ನಂಬರ್ ಮೈಸೂರು ನಗರಾಭಿವೃದ್ಧಿಯ ಕಾನೂನನ್ನು ಪುನಃ ತಿದ್ದುಪಾಟು ಮಾಡುವ ಬಿಲ್ಲು.

(2) ನಿಕ್ಷೇಪದ ವಿಷಯವಾಗಿ ಕಾನೂನು ಏರ್ಪಡಿಸುವ ಬಿಲ್ಲು.

(3) ಮೈಸೂರು ಸೀಮೆಯಲ್ಲಿ ವಿಷಪದಾರ್ಥಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದನ್ನೂ, ಮಾರುವುದನ್ನೂ ಕ್ರಮ ಪಡಿಸುವ ಬಿಲ್ಲು.

226

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನ್ನನ್ನು ಪುನಃ ತಿದ್ದುಪಡಿ ಮಾಡುವಬಗ್ಗೆ ಹುಟ್ಟಿದ ರೆಗ್ಯುಲೇಷನಿನ ಮಸೂದೆ.

1903ನೆ ಇಸವಿಯ ಮೈಸೂರು ನಗರಾಭಿವೃದ್ಧಿ ರೆಗ್ಯುಲೇಷನ್ನನ್ನು ಪುನಃ ತಿದ್ದುಪಡಿ ಮಾಡಬೇಕಾದುದು ಯುಕ್ತವಾಗಿರುವುದರಿಂದ ಘೆನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸಾಹೇಬ್ಬರವರು ಇದರಡಿ ಕಂಡಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಪೀಠಿಕೆ.

1871ನೆ ಇಸವಿಯ ರೆಗ್ಯುಲೇಷನುಗಳಿಗೆ ಬದಲಾಗಿ 1906ನೆ ಇಸವಿಯ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿಗೆ ದಾಖಲೆ ಕೊಡುವುದು.

(1) 1871ನೆ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನುಗಳಿಗೆ ಬದಲಾಗಿ 1906ನೆ ಇಸವಿಯ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿಗೆ ದಾಖಲೆ ಕೊಡತಕ್ಕದ್ದು.

"ಮ್ಯುನಿಸಿಪಲ್ ಕಮಿಷರ್" ವಗೈರೆಗೆ ಬದಲಾಗಿ "ಮ್ಯುನಿಸಿಪಲ್ ಕೌನ್ಸಿಲ್" ವಗೈರೆ ಎಂದು ಓದಿಕೊಳ್ಳತಕ್ಕದ್ದು.

(2) 4, 5, 7, 16, 19, 21, 24, 26, 30, 31, 33, 37 ನುತ್ತು 38ನೆ ಪ್ರಕರಣಗಳಲ್ಲಿ ಇರುವ "ಮ್ಯುನಿಸಿಪಲ್ ಕಮಿಷರ್", "ಮ್ಯುನಿಸಿಪಲ್ ಕಮಿಷನರ್" ಮತ್ತು "ಮ್ಯುನಿಸಿಪಲ್ ಕಮಿಷನರುಗಳು" ಎಂಬ ಪದಗಳಿಗೆ ಬದಲಾಗಿ "ಮ್ಯುನಿಸಿಪಲ್ ಕೌನ್ಸಿಲ್", "ಮ್ಯುನಿಸಿಪಲ್ ಕೌನ್ಸಿಲರ್" ಮತ್ತು "ಮ್ಯುನಿಸಿಪಲ್ ಕೌನ್ಸಿಲರುಗಳು" ಎಂಬ ಪದಗಳನ್ನು ಓದಿಕೊಳ್ಳತಕ್ಕದ್ದು.

4ನೆ ಪ್ರಕರಣದ ತಿದ್ದುಪಾಟು.

(3) ಬೋರ್ಡಿನ ಏರ್ಪಾಟನ್ನು ವಿವರಿಸಿ ಹೇಳುವ 4ನೆ ಪ್ರಕರಣದಲ್ಲಿ "ಎಂಟು" ಎಂಬ ಪದಕ್ಕೆ ಬದಲಾಗಿ "ಒಂಭತ್ತು" ಎಂಬ ಪದವನ್ನೂ, "ಮೈಸೂರು ಡಿಸ್ಪೆನ್ಸರಿಯ ತತ್ಕಾಲದಲ್ಲಿರುವ ಸಿವಿಲ್ ಸರ್ಜನ್" ಎಂಬ ಪದಗಳಿಗೆ ಬದಲಾಗಿ "ಮೈಸೂರು ಸಿಟಿ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರು"; "ಸರ್ಕಾರದ ಡೆಪ್ಯುಟಿ ಸ್ಯಾನಿಟರಿ ಕಮಿಷನರ್ರವರು" ಎಂಬ ಪದಗಳನ್ನೂ ಉಪಯೋಗಿಸತಕ್ಕದ್ದು.

20ನೆ ಪ್ರಕರಣಕ್ಕೆ ಬದಲಾಗಿ ಹೊಸ ಪ್ರಕರಣವನ್ನು ಸೇರಿಸುವುದು.

(4) 20ನೆ ಪ್ರಕರಣಕ್ಕೆ ಬದಲಾಗಿ ಇದರಡಿ ಕಂಡುವನ್ನು ಸೇರಿಸತಕ್ಕದ್ದು.

ಬೀದಿಗಳು, ಚರಂಡಿಗಳು, ಪಾಯಿಖಾನೆಗಳು, ಬಚ್ಚಲುಗಳು ವಗೈರೆಗಳ ವಿಷಯದಲ್ಲಿಯೂ, ನೋಟೀಸುಗಳನ್ನು ಜಾರಿ ಮಾಡುವುದು ವಗೈರೆ ವಿಷಯದಲ್ಲಿಯೂ, ಕೆಲವು ಕಾಮಗಾರಿಗಳನ್ನು ನಿಲ್ಲಿಸಿ ಲಾಗವಡು ವಸೂಲ್ಮಾಡುವ ವಿಷಯದಲ್ಲಿಯೂ ಮ್ಯುನಿಸಿಪಲ್ ಕೌನ್ಸಿಲರುಗಳು ಚಲಾಯಿಸುತ್ತಿರುವ ಕೆಲವು ಅಧಿಕಾರಗಳನ್ನು ಬೋರ್ಡಿನವರು ಚಲಾಯಿಸುವುದು.

"20. 1906ನೆ ವರುಷದ VIIನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನಲ್ಲಿ ಬೀದಿಗಳ ವಿಚಾರವಾಗಿ 41, 50, 90ರಿಂದ 93, 113, 114, 118, 119 ಮತ್ತು 121ರಿಂದ 125ರ ವರೆಗಿನ ಪ್ರಕರಣಗಳಲ್ಲಿ ಮಾಡಿರುವ ನಿಯಮಗಳೂ, ಚರಂಡಿಗಳು, ಪಾಯಿಖಾನೆಗಳು, ಬಚ್ಚಲುಗಳು ವಗೈರೆ ವಿಷಯವಾಗಿ 99ರಿಂದ 105, 107(1), 108, 109, 111 ಮತ್ತು 112ನೆ ಪ್ರಕರಣಗಳಲ್ಲಿ ಮಾಡಿರುವ ನಿಯಮಗಳೂ, ನೋಟೀಸು ಜಾರಿ ವಗೈರೆ ವಿಷಯವಾಗಿ 154ನೆ ಪ್ರಕರಣದಲ್ಲಿ ಮಾಡಿರುವ ನಿಯಮಗಳೂ, ಮತ್ತು ಮನೆ ಮಾಲೀಕರು ಅಥವಾ ವಾಸಸ್ಥರು ಯಾವ್ಯಾವ ಕೆಲಸವನ್ನು ಮಾಡದೆ ತಪ್ಪುತ್ತಾರೆಯೋ ಅಂಥಾ ಕೆಲಸವನ್ನು ಮಾಡಿಸಿ ಅದಕ್ಕಾಗಿ ತಗಲಿದ ಖರ್ಚನ್ನು ವಸೂಲ್ಮಾಡುವ ವಿಷಯವಾಗಿ 156ನೆ ಪ್ರಕರಣದಲ್ಲಿ ಮಾಡಿರುವ ನಿಯಮಗಳೂ ಈ ರೆಗ್ಯುಲೇಷನಿನ ಅಭಿಪ್ರಾಯಕ್ಕೆ ಅನುಗುಣವಾಗಿರುವ ಮಟ್ಟಿಗೆ,

(a) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನ ಎಂಪ್ಲಾಯ್ರಿಗೆ ಕೊಟ್ಟಿರುವ ಬೀದಿಗಳಿಗಾಗಲಿ, ಚರಂಡಿಗಳಿಗಾಗಲಿ, ಪಾಯಿಖಾನೆಗಳಿಗಾಗಲಿ, ಬಚ್ಚಲು ವಗೈರೆಗಳಿಗಾಗಲಿ ಅಥವಾ ಅವುಗಳ ಭಾಗಗಳಿಗಾಗಲಿ, ಮತ್ತು

(b) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನವರು ನೋಟೀಸುಗಳನ್ನು ಜಾರಿ ಮಾಡುವುದಕ್ಕಾಗಲೀ, ಕೆಲಸಗಳನ್ನು ನಡೆಸುವುದಕ್ಕಾಗಲೀ, ಅವುಗಳ ಖರ್ಚನ್ನು ವಸೂಲ್ಮಾಡುವುದಕ್ಕಾಗಲೀ

ಅನ್ವಯಿಸತಕ್ಕದ್ದು; ಮತ್ತು ಸದರಿ ನಿಯಮಗಳಲ್ಲಿ ಮ್ಯುನಿಸಿಪಲ್ ಕೌನ್ಸಿಲರುಗಳು ಅಥವಾ ಇತರ ಮ್ಯುನಿಸಿಪಲ್ ಅಧಿಕಾರಿಗಳು ಎಂದು ಇರುವ ಸ್ಥಳದಲ್ಲಿ "ಬೋರ್ಡು" ಎಂದು ಅನ್ವಯಿಸಿಕೊಳ್ಳತಕ್ಕದ್ದು."

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

1871ನೆ ಇಸವಿಯ ಹಳೆ ಮ್ಯುನಿಸಿಪಲ್ ರೆಗ್ಯುಲೇಷ್ನ ಪ್ರಕಾರ ಮ್ಯುನಿಸಿಪಲ್ ಕಮಿಷನರುಗಳಿಗೆ ಇದ್ದ ಕೆಲವು ಅಧಿಕಾರಗಳನ್ನು ಟ್ರಸ್ಟಿ ಬೋರ್ಡಿನವರು ತಮ್ಮ ತನಿಖೆಗೆ ಒಳಪಟ್ಟ ಬೀದಿಗಳ ವಿಚಾರವಾಗಿ ಚಲಾಯಿಸಲು ಮೈಸೂರು ನಗರಾಭಿವೃದ್ಧಿಯ ರೆಗ್ಯುಲೇಷ್ನಿನ 20ನೆ ಪ್ರಕರಣದಲ್ಲಿ (ಸದರಿ ಟ್ರಸ್ಟಿ ಬೋರ್ಡಿಗೆ) ಅಧಿಕಾರ ಕೊಟ್ಟಿರುತ್ತದೆ. ಬೋರ್ಡಿನವರ ತನಿಖೆಗೆ ಒಳಪಟ್ಟ ಪ್ರದೇಶದಲ್ಲಿ ಮನೇ ಮಾಲೀಕರು ತಮ್ಮ ಮನೆಗಳ ಬಚ್ಚಲು ನೀರು ಸರ್ಕಾರಿ ಚರಂಡಿಗಳಿಗೆ ಸಲೀಸು ಹರಿದು ಹೋಗುವಂತೆ ಅವುಗಳನ್ನು ಕಟ್ಟುವ ವಿಷಯದಲ್ಲಿ ಅವರನ್ನು ನಿರ್ಬಂಧಪಡಿಸಬೇಕೆಂದು ಈ ಪ್ರಕರಣದಲ್ಲಿ ವಿಧಿಸಿರುವುದಿಲ್ಲ. ಹೊಸದಾಗಿ ಕಟ್ಟುವ ಮನೆಗಳು ಅಥವಾ ಈಡೆಗೆ ದುರಸ್ತು ಮಾಡಿರುವ ಮನೆಗಳು ಇವುಗಳ ಮಾಲೀಕರು ಆಯಾ ಮನೆಯ ಬಚ್ಚಲು ನೀರು ಸರ್ಕಾರಿ

227 263

ಚರಂಡಿಗಳಿಗೆ ಹರಿದುಹೋಗುವಂತೆ ಮಾಡಲು ನಿರ್ಬಂಧಪಡಿಸುವ ಅಧಿಕಾರವು ಈಬ್ಬಡಗಳಿಗೆ ಸಂಬಂಧಪಟ್ಟ ಉಪಕಾನೂನುಗಳ ಪ್ರಕಾರ ಬೋರ್ಡಿನವರಿಗೇನೋ ಇದೆ. ಆದರೂ ಇತರ ಹಳ್ಳೀ ಮನೆಗಳ ವಿಷಯದಲ್ಲಿ ಇಂಥಾ ಅಧಿಕಾರ ಮ್ಯುನಿಸಿಪಾಲಿಟಿಯವರಿಗೆ ಇರುತ್ತದೆಯೇ ಹೊರತು ಬೋರ್ಡಿನವರಿಗೆ ಇರುವದಿಲ್ಲ. ಬೋರ್ಡಿನವರ ತನಿಖೆಗೆ ಸೇರಿದ ಪ್ರದೇಶಗಳಲ್ಲಿ ಚರಂಡಿ, ಪಾಕೀಜಾ, ಮತ್ತು ಸಾಧಾರಣ ಆರೋಗ್ಯ ಕ್ರಮ—ಇವುಗಳ ವಿಚಾರದಲ್ಲಿಯೂ ಇದೇ ತೊಂದರೆ ಉಂಟಾಗಿರುತ್ತದೆ. ಆದುದರಿಂದ ಚರಂಡಿ, ಏರ್ಪಾಟು, ಪಾಕೀಜಾ, ಸಾಮಾನ್ಯ ಆರೋಗ್ಯ ವಿಚಾರ, ಈ ವಿಷಯಗಳಲ್ಲಿಯೂ ಮ್ಯುನಿಸಿಪಲ್ ರೆಗ್ಯುಲೇಷ್ಯ ಪ್ರಕಾರ ಮ್ಯುನಿಸಿಪಾಲಿಟಿಯವರು ಚಲಾಯಿಸುತ್ತಿದ್ದ ಅಧಿಕಾರಗಳನ್ನು ಬೋರ್ಡಿನವರಿಗೆ ಕೊಡಬೇಕೆಂದೂ ಈ ಮಸೂದೆಯಲ್ಲಿ ಉದ್ದೇಶಿಸಿರುತ್ತದೆ. (4ನೇ ಕಲಂ ನೋಡಿ.) ಹಳ್ಳೀ ಮ್ಯುನಿಸಿಪಲ್ ರೆಗ್ಯುಲೇಷನ್ನಿನ ದಾಖಲಿಗಳನ್ನು 1906ನೆ ಇಸವಿಯ ಹೊಸ ಮ್ಯುನಿಸಿಪಲ್ ರೆಗ್ಯುಲೇಷನ್ನಿನ ಆಯಾ ಪ್ರಕರಣಗಳಿಗೆ ಅನ್ವಯಿಸುವಂತೆ ಬದಲಾಯಿಸಿ ಇರುತ್ತದೆ.

2. ಸಿವಿಲ್ ಸರ್ಜರಿಗೆ ಬದಲಾಗಿ ಹೆಲ್ತ್ ಆಫಿಸರನ್ನು ಡೆಪ್ಯುಟಿ ಸ್ಯಾನಿಟೆರಿ ಕಮಿಷನರವರನ್ನೂ ಬೋರ್ಡು ಮೆಂಬರುಗಳಾಗಿ ನೇಮಿಸಿ ತನ್ಮೂಲಕ ಬೋರ್ಡಿನಲ್ಲಿ ಯಾರ್ಯಾರು ಇರಬೇಕೆಂಬುದಾಗಿ ವಿಧಿಸುವ 4ನೇ ಪ್ರಕರಣವನ್ನೂ ಸಹ ಈ ಸಂದರ್ಭದಲ್ಲಿ ತಿದ್ದುಪಾಟು ಮಾಡಿರುತ್ತದೆ.

ನಿಕ್ಷೇಪದ ವಿಷಯವಾಗಿ ಕಾನೂನು ಏರ್ಪಡಿಸುವ ಬಿಲ್ಲು (ಮೈಸೂರಿ).

ಪೀಠಿಕೆ.

ಮೈಸೂರು ಸೀಮೆಯಲ್ಲಿ ಸಿಕ್ಕುವ ನಿಕ್ಷೇಪಗಳಿಗೆ ಅನ್ವಯಿಸುವಂತೆ ಬಂದು ಕಾನೂನನ್ನು ಏರ್ಪಡಿಸುವುದು ಯುಕ್ತವಾಗಿರುವುದರಿಂದ ಘನವನ್ನೈದಿದ ಶ್ರೀಮರ್ಮ ಮಹಾರಾಜಾ ಸಾಹೇಬ್ಬರವರು ಈ ಕೆಳಗೆ ಕಂಡಂತೆ ವಿಧಿಸಲು ಅಪ್ಪಣೆ ಚಯಪಾಲಿಸಿರುತ್ತಾರೆ.

ಅವತರಣಿಕೆ.

ಚಿಕ್ಕ ಹೆಸರು.

1. ಈ ರೆಗ್ಯುಲೇಷನ್ನನ್ನು "ಮೈಸೂರು ಸೀಮೆಯಲ್ಲಿ ಸಿಕ್ಕುವ ನಿಕ್ಷೇಪಗಳನ್ನು ಕುರಿತ 190.....ನೆ ವರ್ಷದ ರೆಗ್ಯುಲೇಷ್ಯ" ಎಂದು ಕರೆಯುಬಹುದು.

ವ್ಯಾಪ್ತಿ.

ಇದು ಮೈಸೂರು ಸೀಮೆಗೆಲ್ಲಾ ವ್ಯಾಪಿಸುತ್ತದೆ.

ಪ್ರಾರಂಭ.

ಇದು ಮಂಜೂರಾಗುವ ತಾರೀಖಿನಿಂದ ಜಾರಿಯಲ್ಲಿ ಬರತಕ್ಕದ್ದು.

ಹಾಲಿ ಜಾರಿಯಲ್ಲಿರುವ ವಿಧಿಗಳನ್ನು ರದ್ದು ಮಾಡುವುದು.

2. ಚೀಫ್ ಕಮಿಷನರ್ ಸಾಹೇಬರವರ 1867ನೆ ಇಸವಿಯ ಏಪ್ರೆಲ್ 17ನೆ ತಾರೀಖಿನ 6ನೆ ನಂ. ಇಸ್ತಿಹಾರ್ನಾಮೆಯೊಡನೆ ನಿಕ್ಷೇಪಗಳ ವ್ಯವಸ್ಥೆಗಾಗಿ ಪ್ರಕಟಿಸಿದ್ದ ನಿಬಂಧನೆಗಳನ್ನು ಇದರಿಂದ ರದ್ದು ಮಾಡಿದೆ.

(1878ನೆ ಇಸವಿಯ 6ನೆ ನಂ. ಕಾನೂನಿನ 3ನೆಯ ಪ್ರಕರಣ.)

ಅರ್ಥ ವಿವರಣೆಯ ಕಲಂ.

3. ಈ ರೆಗ್ಯುಲೇಷನಿನೊಳಗೆ—

ನಿಕ್ಷೇಪ.

"ನಿಕ್ಷೇಪ" ಎಂಬ ಮಾತು ಭೂಮಿಯಲ್ಲಾಗಲಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಸ್ತುವಿನಲ್ಲಾಗಲಿ ಅಂತರ್ಹಿತವಾಗಿರುವ ಎಷ್ಟೇ ಬೆಲೆಯುಳ್ಳ ಯಾವುದಾದರೂ ಬಂದು ಪದಾರ್ಥವೆಂದು ಅರ್ಥವನ್ನು ಕೊಡುತ್ತದೆ.

ಡೆಪ್ಯುಟಿ ಕಮಿಷನರು.

"ಡೆಪ್ಯುಟಿ ಕಮಿಷನರು" ಎಂಬ ಮಾತುಗಳಿಗೆ (1) ಬಂದು ಡಿಸ್ಟ್ರಿಕ್ಟಿನ ಸ್ವತಂತ್ರಾಧಿಕಾರದಲ್ಲಿರುವ ರೆವಿನ್ಯೂ ಆಫಿಸರು ಮತ್ತು (2) ಈ ರೆಗ್ಯುಲೇಷನಿಗನುಗುಣವಾಗಿ ಡೆಪ್ಯುಟಿ ಕಮಿಷನರವರ ಕೆಲಸಗಳನ್ನು ಮಾಡಲು ಸರ್ಕಾರದವರಿಂದ ನೇಮಕವಾದ ಇತರ ಆಫಿಸರು ಎಂದು ಅರ್ಥ.

ಸ್ವತ್ತಿನ ಮಾಲೀಕ.

ಯಾವುದಾದರೂ ಜಮೀನನ್ನಾಗಲಿ ಅದಕ್ಕೆ ಸಂಬಂಧಿಸಿದ ವಸ್ತುವನ್ನಾಗಲಿ ತನಗೆ ಪರಭಾರೆ ಮಾಡಿದ ಬಾಬ್ತು ಹುಟ್ಟಿದ ಪತ್ರದ ಆಧಾರದ ಮೇರೆಗೆ ತಾನು ಉಳಿಸಿಕೊಂಡಿರುವ ಜಮೀನಿನಲ್ಲಿ ಅಥವಾ ವಸ್ತುವಿನಲ್ಲಿ ಸಿಕ್ಕುವ ನಿಕ್ಷೇಪಕ್ಕೆ ಹಕ್ಕುಳ್ಳ ಮನುಷ್ಯನನ್ನು ಈ ರೆಗ್ಯುಲೇಷನಿನ ಉದ್ದೇಶಕ್ಕಾಗಿ ಸದರೀ ಜಮೀನಿನ ಅಥವಾ ವಸ್ತುವಿನ ಮಾಲೀಕನೆಂದು ಎಣಿಸಬೇಕು.

ನಿಕ್ಷೇಪವು ಸಿಕ್ಕಿದಾಗ ನಡೆಸಬೇಕಾದ ಅಮಲ್.

(1878ನೆ ಇಸವಿಯ 6ನೆ ನಂ. ಕಾನೂನಿನ 4ನೆಯ ಪ್ರಕರಣ.)

ನಿಕ್ಷೇಪ ಯಾರಿಗೆ ಸಿಕ್ಕುವದೋ ಅವರು ಕೊಡಬೇಕಾದ ನೋಟೀಸು ಯಾನೆ ವರ್ತಮಾನ.

4. ಹತ್ತು ರೂಪಾಯಿಗಿಂತ ಹೆಚ್ಚು ಬೆಲೆಯುಳ್ಳ ಯಾವ ನಿಕ್ಷೇಪವಾದರೂ ಸಿಕ್ಕಿದಾಗ, ಈ ಕೆಳಗಣ ತಪ್ಪೀಲುಗಳನ್ನು ಕಾಣಿಸಿ ಲಿಖಿತ ಮೂಲಕವಾಗಿ ಸದರಿ ನಿಕ್ಷೇಪ ಕಂಡವನು ಡೆಪ್ಯುಟಿ ಕಮಿಷನರಿಗೆ ಕೂಡಿದ ಮಟ್ಟಿಗೂ ಜಾಗ್ರತೆಯಾಗಿ ವರ್ತಮಾನ ಕೊಡಬೇಕು.

228

(ಅ) ಅಂಥಾ ನಿಕ್ಷೇಪದ ಸ್ವಭಾವ ಮತ್ತು ಬೊತ್ತ ಅಥವಾ ಅದರ ಸುಮಾರು ಬೆಲೆ,

(ಬ) ಅದು ಸಿಕ್ಕಿದ ಸ್ಥಳ,

(ಸ) ಅದು ಸಿಕ್ಕಿದ ತಾರೀಖು.

ಮತ್ತು ಸದರೀ ನಿಕ್ಷೇಪವನ್ನು ಅತ್ಯಂತ ಸಮೀಪದಲ್ಲಿರುವ ಸರ್ಕಾರದ ಖಜಾನೆಯಲ್ಲಿಯಾದರೂ ಇಡಬಹುದು; ಅಥವಾ ಪ್ಯೂಟಿ ಕಮಿಷನರು ಆಗಿಂದಾಗ್ಯೆ ಕ್ಲುಪ್ತ ಮಾಡುವ ಕಾಲದಲ್ಲಿ ಮತ್ತು ಸ್ಥಳದಲ್ಲಿ ಅದನ್ನು ಹಾಜರ್ಮಾಡುವುದಕ್ಕೋಸ್ಕರ ಡೆಪ್ಯೂ ಕಮಿಷನರಿಗೆ ಯುಕ್ತ ಜೋರಿ ಗೊತ್ತು ಮಾಡುವ ಜಾಮೀನನ್ನಾದರೂ ಕೊಡಬಹುದು.

(1878ನೆ ಇಸವಿಯ 6ನೆ ನಂ.
ಕಾನೂನಿನ 5ನೆಯ ಪ್ರಕರಣ.)

ಹಕ್ಕುದಾರರು ಹಾಜರಾಗತಕ್ಕದ್ದೆಂಬ ದಾಗಿ ಇಸ್ತಿಹಾರ್ನಾಮೆ.

5. 4ನೆ ಪ್ರಕರಣಕ್ಕನುಗುಣವಾಗಿ ವರ್ತಮಾನ ಬಂದ ಮೇಲ ಡೆಪ್ಯೂಟಿ ಕಮಿಷನರವರು ತಮಗೆ ಯುಕ್ತ ಜೋರುವ ವಿಚಾರಣೆಯನ್ನು ನಡೆಸಿ ಈ ಕೆಳಗೆ ವಿವರಿಸಿರುವ ಕ್ರಮಗಳನ್ನು ಜರುಗಿಸಬೇಕು:—

(ಅ) ಸರ್ಕಾರದವರು ಆಗಿಂದಾಗ್ಯೆ ಈ ಭಾಗದಲ್ಲಿ ವಿಧಿಸುವ ಮೇರಗೆ ಅವರು (ಡೆಪ್ಯೂಟಿ ಕಮಿಷನರು) ಕೆಳಗಣ ತಪ್ಸೀಲುಗಳ ನಿತಿ ಬಂದು ಇಸ್ತಿಹಾರ್ನಾಮೆಯನ್ನು ಪ್ರಕಟಿಸಬೇಕು:—ಫಲಾನೆ ತಾರೀಖಿನಲ್ಲಿ (ಆ ತಾರೀಖನ್ನು ನಮೂದಿಸಬೇಕು) ಫಲಾನೆ ಸ್ಥಳದಲ್ಲಿ (ಆ ಸ್ಥಳವನ್ನು ನಮೂದಿಸಬೇಕು) ಫಲಾನೆ ನಿಕ್ಷೇಪ (ಅದರ ಸ್ವಭಾವ, ಬೊತ್ತ ಮತ್ತು ಸುಮಾರು ಬೆಲೆ— ಇವುಗಳನ್ನು ನಮೂದಿಸಬೇಕು) ಸಿಕ್ಕಿರುವುದೆಂತಲೂ, ಇಸ್ತಿಹಾರ್ನಾಮೆಯಲ್ಲಿ ನಮೂದಿಸಿರುವ ದಿವಸದಲ್ಲಿ ಮತ್ತು ಸ್ಥಳದಲ್ಲಿ ಸದರಿ ನಿಕ್ಷೇಪದಲ್ಲಾಗಲಿ ಅದರ ಭಾಗದಲ್ಲಾಗಲಿ ಬಾಧ್ಯತೆಯುಳ್ಳವರೆಲ್ಲರೂ ಡೆಪ್ಯೂಟಿ ಕಮಿಷನರವರ ರೂಬರೂಬ್ ಖುದ್ದಾಗಿಯಾಗಲಿ ಮುಖ್ತಾರೀಕರ ಮೂಲಕವಾಗಿ ಆಗಲಿ ಹಾಜರಾಗತಕ್ಕದ್ದೆಂತಲೂ ಪ್ರಕಟಿಸಬೇಕು. ಹಾಗೆ ಗೊತ್ತಾದ ತಾರೀಖು ಇಸ್ತಿಹಾರ್ನಾಮೆ ಪ್ರಕಟವಾದ ತಾರೀಖು ಲಾಗಾಯಿತು ನಾಲ್ಕು ತಿಂಗಳು ಮೇಲೆ ಆರು ತಿಂಗಳೊಳಗೆ ಇರಬೇಕು.

(ಬ) ನಿಕ್ಷೇಪ ಸಿಕ್ಕಿದ ಸ್ಥಳವು ಅದು ಸಿಕ್ಕಿದ ತಾರೀಖಿನಲ್ಲಿ ಅವನ್ನು ಕಂಡವನ ಸ್ವಾಧೀನದಲ್ಲಿರದೆ ಮತ್ತೊಬ್ಬನ ಸ್ವಾಧೀನದಲ್ಲಿರುವಂತೆ ಡೆಪ್ಯೂಟಿ ಕಮಿಷನರವರಿಗೆ ತಿಳಿಯಬಂದರೆ ಆ ಮನುಷ್ಯನಿಗೂ ಸಹ ಅದೇ ರೀತ್ಯಾ ಡೆಪ್ಯೂಟಿ ಕಮಿಷನರವರು ಲಿಖಿತಮೂಲಕ ಪ್ರತ್ಯೇಕವಾಗಿ ಬಂದು ನೋಟೀಸನ್ನು ಕೊಡಬೇಕು.

(1878ನೆ ಇಸವಿಯ 6ನೆ ನಂ.
ಕಾನೂನಿನ 6ನೆಯ ಪ್ರಕರಣ.)

ಹಾಜರಾಗದೆ ಇದ್ದರೆ ಹಕ್ಕು ತಪ್ಪಿಹೋಗುವುದು.

6. ತನಗೆ ಸೇರಿದ ಸ್ಥಳದಲ್ಲಿ ಸದರಿ ನಿಕ್ಷೇಪವು ಸಿಕ್ಕಿತೆಂಬ ಸಬಬಿನ ಮೇಲಾಗಲಿ, ಇತರ ಸಬಬಿನ ಮೇಲಾಗಲಿ ಅದರಲ್ಲಿ ಅಥವಾ ಅದರ ಬಂದು ಭಾಗದಲ್ಲಾಗಲಿ ಹಕ್ಕುಳ್ಳಂಥಾವನು 5ನೆಯ ಪ್ರಕರಣಕ್ಕೆ ಅನುಗುಣವಾಗಿ ಪ್ರಕಟಿಸಿದ ಇಸ್ತಿಹಾರಿನಲ್ಲಿ ಅಪ್ಪಣೆ ಮೇರೆಗೆ ಹಾಜರಾಗದೆ ಹೋದರೆ ಸದರೀ ಹಕ್ಕನ್ನು ಹೋಗಲಾಡಿಸಿಕೊಳ್ಳುವನು.

(1878ನೆ ಇಸವಿಯ 6ನೆ ನಂ.
ಕಾನೂನಿನ 7ನೆಯ ಪ್ರಕರಣ).

ಡೆಪ್ಯೂಟಿ ಕಮಿಷನರವರು ವಿಚಾರಣೆ ಮಾಡಿ ದೃಢಪಡಿಸಬೇಕಾದ ಅಂಶಗಳು.

7. 5ನೆಯ ಪ್ರಕರಣಕ್ಕನುಗುಣವಾಗಿ ಪ್ರಕಟಿಸಿದ ತಾರೀಖಿನ ದಿವಸ ಡೆಪ್ಯೂಟಿ ಕಮಿಷನರವರು ಸದರಿ ನಿಕ್ಷೇಪವನ್ನು ತಮ್ಮ ರೂಬರೂಬ್ ಹಾಜರ್ಪಡಿಸಿಕೊಂಡು ಈ ಕೆಳಗಣ ಅಂಶಗಳ ವಿಚಾರವಾಗಿ ತನಿಖೆ ನಡಿಸಿ ದೃಢಪಡಿಸಿಕೊಳ್ಳಬೇಕು;—

(ಅ) ಸದರೀ ನಿಕ್ಷೇಪವು ಯಾರಿಗೆ, ಯಾವ ಸ್ಥಳದಲ್ಲಿ ಮತ್ತು ಯಾವ ಸಂದರ್ಭಗಳಲ್ಲಿ ಸಿಕ್ಕಿತು; ಮತ್ತು

(ಬ) ಈ ನಿಕ್ಷೇಪವನ್ನು ಯಾರು ಯಾವ ಸಂದರ್ಭಗಳಲ್ಲಿ ಬಚ್ಚಿಟ್ಟರು? (ಸಾಧ್ಯವಾಗುವ ಮಟ್ಟಿಗೂ)

(1878ನೆ ಇಸವಿಯ 6ನೆ ನಂ.
ಕಾನೂನಿನ 8ನೆಯ ಪ್ರಕರಣ).

ನಿಕ್ಷೇಪದಲ್ಲಿ ತನಗೆ ಹಕ್ಕುಂಟೆಂದು ಬೇಳುವ ಮನುಷ್ಯನು ದಾವೆ ತರಲು ಕಾಲಾವಧಿ.

8. 7ನೆಯ ಪ್ರಕರಣವನ್ನನುಸರಿಸಿ ವಿಚಾರಣೆ ನಡೆಸಿದ್ದರಮೇಲೆ, ಇಸ್ತಿಹಾರ್ನಾಮೆಗೆ ಅನುಸಾರವಾಗಿ ಹಾಜರಾದ ಮತ್ತು ನಿಕ್ಷೇಪವು ತನ್ನದೆಂದು ವಾದಿಸುವ ಮನುಷ್ಯನಿಂದ ಅಥವಾ ಆತನಿಗೆ ಯಾರಿಂದ ಬಾಧ್ಯತೆಯು ಜುಟ್ಟಿತೋ ಅಂಥಾ ಮನುಷ್ಯನಿಂದ ಸದರೀ ನಿಕ್ಷೇಪವು ಸಿಕ್ಕಿದ ತಾರೀಖಿನ ಹಿಂದೆ ನೂರು ವರ್ಷಗಳೊಳಗಾಗಿ ಅದು ಬಚ್ಚಿಡಲ್ಪಟ್ಟಿತ್ತೆಂದು ನಂಬಲು ಡೆಪ್ಯೂಟಿ ಕಮಿಷನರವರಿಗೆ ಕಾರಣ ಕಂಡು ಬಂದರೆ, ಆ ಮನುಷ್ಯನು ತನ್ನ ಬಾಧ್ಯತೆಯನ್ನು ಊರ್ಜಿತ ಪಡಿಸಿಕೊಳ್ಳತಕ್ಕ ಬಗ್ಗೆ ಸಿವಿಲ್ ಕೋರ್ಟಿನಲ್ಲಿ ದಾವೆ ಹೂಡುವುದಕ್ಕೋಸ್ಕರ ಎಷ್ಟು ಕಾಲ ಬೇಕಾಗುತ್ತದೆಂದು ಡೆಪ್ಯೂಟಿ ಕಮಿಷನರಿಗೆ ತೋರುತ್ತದೆಯೋ ಅಷ್ಟು ವ್ಯವಧಾನವನ್ನು ಕೊಟ್ಟು ತಮ್ಮ ವಿಚಾರಣೆ ಬಗ್ಗೆ ಮೊಕದ್ದಮೆಯನ್ನು ಅಡ್ಜರ್ನ್ ಮಾಡಿರುತ್ತದೆಂದು ಹುಕುಂ ಮಾಡಬೇಕು.

(1878ನೆ ಇಸವಿ 6ನೆ ನಂ.
ಕಾನೂನಿನ 9ನೆಯ ಪ್ರಕರಣ).

ನಿಕ್ಷೇಪಕ್ಕೆ ವಾರೀಕನು ಇಲ್ಲವೆಂದು ಯಾವಾಗ ಹೇಳಬಹುದು.

9. ಹೀಗೆ ವಿಚಾರಣೆ ನಡೆಸಿದ್ದರ ಮೇಲೆ ನಿಕ್ಷೇಪವನ್ನು ಹಾಗೆ ಬಚ್ಚಿಟ್ಟವನ್ನಂತೆ ನಂಬಲು ಕಾರಣವಿಲ್ಲವೆಂದು ಡೆಪ್ಯೂಟಿ ಕಮಿಷನರವರಿಗೆ ತೋರಿದರೆ; ಆಗವಾ

೭ನೆಯ ಪ್ರಕರಣಕ್ಕೆ ಅನುಗುಣವಾಗಿ ಬಂದು ವಾಯಿದೆಯು ನಿಷ್ಕರ್ಷೆಯಾಗಿದ್ದಲ್ಲಿ ಡೆಪ್ಯುಟಿ ಕಮಿಷನರಿಗೆ ಗೊತ್ತಿರುವ ಮಟ್ಟಿಗೂ ಸದರೀ ವಾಯಿದೆಯ ಒಳಗಾಗಿ ಯಾವ ದಾವೆಯೂ ದಾಖಲಾಗದ ಇದ್ದರೆ ; ಅಥವಾ

ಸದರೀ ವಾಯಿದೆಯೊಳಗೆ ಅಂಥಾ ದಾವೆಯು ದಾಖಲಾಗಿದ್ದು ಪರ್ಯವಸಾನದಲ್ಲಿ ವಾದಿಗೆ ಹಕ್ಕಿಲ್ಲವೆಂದು ತೀರ್ಮಾನವಾಗಿದ್ದರೆ ;

ಸದರೀ ನಿಕ್ಷೇಪಕ್ಕೆ ವಾರೀಕನು ಇಲ್ಲವೆಂಬದಾಗಿ ಡೆಪ್ಯುಟಿ ಕಮಿಷನರವರು ಹೇಳಿಬಿಡಬಹುದು.

ಇಂಥಾ ಹೇಳಿಕೆಯ ಮೇಲೆ ಅಪೀಲು.

ಈ ಪ್ರಕರಣಕ್ಕೆ ಅನುಗುಣವಾದ ಹೇಳಿಕೆಯಿಂದ ಅಸಮಾಧಾನಪಟ್ಟ ಯಾವ ಮನುಷ್ಯನಾದರೂ ಆ ತಾರೀಖು ಮೊದಲು ಎರಡು ತಿಂಗಳೊಳಗಾಗಿ ಸರ್ಕಾರದವರಿಗೆ ಅಪೀಲು ಮಾಡಿಕೊಳ್ಳಬಹುದು.

ಇಂಥಾ ಅಪೀಲಿಗೆ ಒಳಪಟ್ಟು ಸದರೀ ಹೇಳಿಕೆಯು ಆಕ್ಷೇರಾದ ವಸ್ತು ಖಚಿತವಾದ ತೀರ್ಮಾನವಾಗಿರತಕ್ಕದ್ದು.

(1878ನೆ ಇಸವಿಯ 6ನೆ ನಂ. ಕಾನೂನಿನ 10ನೆಯ ಪ್ರಕರಣ.)

ಹೇಳಿಕೆಯ ಅನಂತರ ನಡೆಸಬೇಕಾದ ಅಮಲ್.

10. ಒಂದು ನಿಕ್ಷೇಪವನ್ನು ಕುರಿತು 9ನೆಯ ಪ್ರಕರಣಕ್ಕೆ ಅನುಗುಣವಾಗಿ ಹೇಳಿಕೆಯಾದನಂತರ ಈ ಮುಂದೆ ಬರುವ ನಿಯಮಗಳಿಗನುಸಾರವಾಗಿ ಸದರೀ ನಿಕ್ಷೇಪವನ್ನು ವಿಲೆ ಮಾಡಬೇಕು.

(1878ನೆ ಇಸವಿಯ 6ನೆ ನಂ. ಕಾನೂನಿನ 11ನೆಯ ಪ್ರಕರಣ—ಸ್ವಲ್ಪ ಬದಲಾಯಿಸಿದೆ.)

ಸ್ಥಳದ ವಾರೀಕನೆಂಬ ಸಬಬಿನ ಮೇಲೆ ಹಕ್ಕನ್ನು ಯಾರೂ ತರದೆಹೋದರೆ ಕಂಡುಹಿಡಿದವನಿಗೆ ನಿಕ್ಷೇಪವನ್ನು ಕೊಡತಕ್ಕದ್ದು.

11. ಹಿಂದೆ ಹೇಳಿರುವ ರೀತಿಯಲ್ಲಿ ಬಂದು ನಿಕ್ಷೇಪದ ವಿಷಯವಾಗಿ ಹೇಳಿಕೆಯಾದನಂತರ ಆ ನಿಕ್ಷೇಪವು ಯಾರಿಗೆ ಸಿಕ್ಕಿತೋ ಅವರು ಜೊತೆಯಾಗಿ ಮತ್ತಾರೂ ೨ನೆಯ ಪ್ರಕರಣಾನುಸಾರವಾಗಿ ಪ್ರಕಟಿತವಾದ ಇಸ್ತಿಹಾರ್ನಲ್ಲಿ ಕೋರಿದಮೇರೆ ಹಾಜರಾಗಿ ತಾನು ನಿಕ್ಷೇಪ ಸಿಕ್ಕಿದ ಸ್ಥಳದ ವಾರೀಕನೆಂಬ ಪ್ರಭಾವಮೇಲೆ ತನಗೂ ಅವರಲ್ಲಿ ಒಂದು ಹಿಸ್ಸೆ ಬರಬೇಕೆಂದು ಹಕ್ಕು ಕಾರದೆ ಇದ್ದಲ್ಲಿ ಡೆಪ್ಯುಟಿ ಕಮಿಷನರವರು 16ನೆಯ ಪ್ರಕರಣದ ನಿಯಮಕ್ಕೆ ಒಳಪಟ್ಟು ಕಂಡುಹಿಡಿದವನಿಗೆ ಅಂಥಾ ನಿಕ್ಷೇಪವನ್ನು ಒಪ್ಪಿಸಿಬಿಡಬೇಕು.

(1878ನೆ ಇಸವಿಯ 6ನೆ ನಂ. ಕಾನೂನಿನ 12ನೆಯ ಪ್ರಕರಣ.)

ಹಕ್ಕಿನ ಬಾಧ್ಯತೆಯುಳ್ಳವನು ಬಬ್ಬನು ಮಾತ್ರ ಇದ್ದು, ಅವನ ಹಕ್ಕಿನ ವಿಚಾರತಕರಾರೇನೂ ಇಲ್ಲದೆ ಹೋದರೆ ನಿಕ್ಷೇಪವನ್ನು ಹಂಚಿಕೆಮಾಡಬೇಕು.

12. ಹಿಂದೆ ಹೇಳಿದಹಾಗೆ ಹೇಳಿಕೆಯಾದನಂತರ ನಿಕ್ಷೇಪವನ್ನು ಕಂಡುಹಿಡಿದ ಮನುಷ್ಯನಲ್ಲದೆ ಬೇರೆ ಒಬ್ಬ ಇಸಂ ಮನುಷ್ಯನು ಹಾಜರಾಗಿ ತನ್ನ ಹಕ್ಕಿನ ವಿಚಾರದಲ್ಲಿ ವಾದಿಸಿದಾಗ ಸ್ಥಳದ ವಾರೀಕನ ತಕರಾರೇನೂ ಇಲ್ಲದಿದ್ದಲ್ಲಿ ಹೋದರೆ ಡೆಪ್ಯುಟಿ ಕಮಿಷನರವರು ಕಂಡುಹಿಡಿದವನಿಗೂ ಅಂಥಾ ಹಕ್ಕುದಾರನಿಗೂ ಆ ನಿಕ್ಷೇಪವನ್ನು ಈ ಕೆಳಗಿನ ನಿಬಂಧನೆಗೆ ಅನುಸಾರವಾಗಿ ಹಂಚಿಕೆ ಮಾಡಬೇಕು :—

ನಿಕ್ಷೇಪವನ್ನು ಕಂಡು ಹಿಡಿದಂಥಾವನೂ ಅದರಲ್ಲಿ ಹಕ್ಕುಂಟೆಂದು ವಾದಿಸುವವನೂ ಸದರೀ ನಿಕ್ಷೇಪದ ವಿಲೇವಾರಿ ವಿಷಯದಲ್ಲಿ ಆಗ್ಗೆ ಜಾರಿಯಲ್ಲಿರುವ ಒಡಂಬಡಿಕೆ ಯಾವುದನ್ನೂ ಮಾಡಿಕೊಳ್ಳದೆ ಇದ್ದಲ್ಲಿ ನಿಕ್ಷೇಪವಲ್ಲಿ ಅರ್ಧಭಾಗವನ್ನು ಕಂಡುಹಿಡಿದವನಿಗೂ, ಉಳಿದ ಅರ್ಧಭಾಗವನ್ನು ಸದರಿ ಹಕ್ಕುದಾರನಿಗೂ ಹಂಚಬೇಕು. ಈ ಉಭಯತ್ರರೂ ಯಾವುದಾದರೂ ಒಡಂಬಡಿಕೆಯನ್ನು ಮಾಡಿಕೊಂಡಿದ್ದರೆ ಅದಕ್ಕನುಗುಣವಾಗಿ ಸದರೀ ನಿಕ್ಷೇಪವನ್ನು ವಿಲೆಮಾಡಬೇಕು.

ಪರಂತು ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದರೆ ಈ ಪ್ರಕರಣದಲ್ಲಿ ಮೇಲೆ ಹೇಳಿರುವ ರೀತ್ಯಾ ಹಂಚಿಕೆ ಮಾಡುವದಕ್ಕೆ ಬದಲಾಗಿ ಈ ಕೆಳಗೆ ಹೇಳಿರುವ ಪ್ರಕಾರ ಮಾಡಬಹುದು.

(a) ಬಬ್ಬ ಕಕ್ಷಿಗಾರನು ಇನ್ನೊಬ್ಬ ಕಕ್ಷಿಗಾರನ ಹಿಸ್ಸೆಗೆ ಸಮವೆಂದು ಡೆಪ್ಯುಟಿ ಕಮಿಷನರವರು ಗೊತ್ತುಮಾಡುವ ಮೊಬಲಗನ್ನಾಗಲೀ ಅಥವಾ ಹಂಚುವುದರಲ್ಲಿ ತನಗೆ ಜಾಸ್ತಿಯಾಗಿ ಬಂದ ಭಾಗದ ಮೊಬಲಗನ್ನಾಗಲೀ ಆಯಾ ಸಂದರ್ಭಾನುಸಾರ ಆ ಇತರ ಕಕ್ಷಿಗಾರನಿಗೆ ಪಾವತಿಯಾಗುವುದಕ್ಕೋಸ್ಕರ ಡೆಪ್ಯುಟಿ ಕಮಿಷನರಿಗೆ ನಂದಾಯ ಮಾಡಿದಲ್ಲಿ ಸದರಿ ಹಿಸ್ಸೆಯನ್ನಾಗಲಿ ಅಥವಾ ಪೂರಾ ನಿಕ್ಷೇಪವನ್ನಾಗಲೀ ಅಥವಾ ಇವನ ಹಿಸ್ಸೆಗಿಂತ ಜಾಸ್ತಿಯನ್ನಾಗಲೀ ಇವನಿಗೆ ಕೊಡಬಹುದು ; ಅಥವಾ

(b) ಸರ್ಕಾರದವರ ಮುಂಜೂರಾತಿಯನ್ನು ಪಡೆದು ಮತ್ತು ಅವರು ಹುಕುಂ ಏನಾದರೂ ಕೊಟ್ಟರೆ ಅದಕ್ಕನುಸಾರವಾಗಿ ಆ ನಿಕ್ಷೇಪವನ್ನಾಗಲೀ ಅದರ ಒಂದು ಭಾಗವನ್ನಾಗಲೀ ಬಹಿರಂಗವಾದ ಹರಾಜಿನಲ್ಲಿ ಮಾರಿ ಬಂದ ಹುಟ್ಟುವಳಿಯನ್ನು ಕಕ್ಷಿಗಾರರಿಗೆ ಹಿಂದೆ ವಿಧಾಯಕ ಮಾಡಿರುವ ನಿಬಂಧನೆಗೆನುಸಾರವಾಗಿ ವಿಭಾಗಿಸಬೇಕು.

ಪರಂತು, 9ನೆಯ ಪ್ರಕರಣಕ್ಕನುಗುಣವಾಗಿ ಡೆಪ್ಯುಟಿ ಕಮಿಷನರವರು ಪ್ರಕಟಿಸಿದ ಹೇಳಿಕೆಯ ಪ್ರಕಾರ, ನಿಕ್ಷೇಪ ಯಾರಿಗೆ ಸಿಕ್ಕಿತೋ ಅವನು ಅಥವಾ ನಿಕ್ಷೇಪ ಸಿಕ್ಕಿದ ಸ್ಥಳದ ವಾರೀಕನಲ್ಲದ ಇತರರು ಈ ರೆಗ್ಯುಲೇಷ್ನ ಮೇರೆಗೆ ತಂದ ಹಕ್ಕು ತಿರ

ಸಾರವಾಗಿದ್ದರೆ, ಯಾರ ಹಕ್ಕು ಹಾಗೆ ತೀರಸ್ಕಾರವಾಯಿತೋ ಆತನು ಈನೆಯ ಪ್ರಕರಣಕ್ಕನುಸಾರವಾಗಿ ಅಪೀಲು ಮಾಡಿದೆ ಇದ್ದರೆ ಎರಡು ತಿಂಗಳವರಿಗೂ ಅಥವಾ ಹಾಗೆ ಅಪೀಲು ಮಾಡಿದ್ದರೆ ಅಂಥಾ ಅಪೀಲು ವಜಾ ಆಗುವವರೆಗೂ ನಿಕ್ಷೇಪವು ಜಾರಿಯಾಗಕೂಡದು.

ಮತ್ತು ಕಕ್ಷಿಗಾರರಿಗೆ ಹಿಸ್ಸೆಗಳನ್ನು ಬಿಡಿಸುವುದು.

ಡೆಪ್ಯೂಟಿ ಕಮಿಷನರವರು ಈ ಪ್ರಕರಣಕ್ಕನುಗುಣವಾಗಿ ಹಂಚಿಕೆ ಮಾಡಿದಮೇಲೆ ಅಂಥಾ ಹಂಚಿಕೆಯ ಪ್ರಕಾರ ಅವರವರಿಗೆ ಪ್ರತ್ಯೇಕವಾಗಿ ಸಲ್ಲಬೇಕಾದ ನಿಕ್ಷೇಪದ ಭಾಗಗಳನ್ನಾಗಲೀ ಅಥವಾ ಅವುಗಳಿಗೆ ಬದಲಾಗಿ ಹಣವನ್ನಾಗಲೀ ಕಕ್ಷಿಗಾರರಿಗೆ ಪಾವತಿಮಾಡಬೇಕು.

(1878ನೆ ಇಸವಿಯ 6ನೆ ನಂ. ಕಾನೂನಿನ 13ನೆಯ ಪ್ರಕರಣ.)

ಸ್ಥಳದ ಮಾಲೀಕನು ಇಂಥವನೇ ಎಂಬ ವಿಷಯದಲ್ಲಿ ವಿವಾದವೇನಾದರೂ ಇದ್ದರೆ ಮುಂದಣ ವ್ಯವಹರಣೆಯನ್ನು ನಿಲ್ಲಿಸಬೇಕು.

13. ಯಾವುದಾದರೊಂದು ನಿಕ್ಷೇಪದ ವಿಚಾರದಲ್ಲಿ ಮೇಲ್ಕಂಡಂತೆ ಹೇಳಿಕೆಯಾಗಿರುವಾಗ ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚಾದುಮಂದಿ ಹಿಂದೆ ವಿವರಿಸಿರುವ ರೀತ್ಯಾ ಹಾಜರಾಗಿ ಪ್ರತಿಯೊಬ್ಬನೂ ತಾನೇ ಸದರೀ ನಿಕ್ಷೇಪ ಸಿಕ್ಕಿದ ಸ್ಥಳದ ಮಾಲೀಕನೆಂದು ವಾದಿಸುವ ಪಕ್ಷದಲ್ಲಾಗಲೀ ಅಥವಾ ಹಾಗೆ ಹಾಜರಾಗಿ ವಾದಿಸುವ ಮನುಷ್ಯನ ಹಕ್ಕಿನ ವಿಷಯವಾಗಿ ನಿಕ್ಷೇಪ ಯಾರಿಗೆ ಸಿಕ್ಕಿತೋ ಅವನು ವಿವಾದ ಮಾಡುವಪಕ್ಷದಲ್ಲಾಗಲೀ ಡೆಪ್ಯೂಟಿ ಕಮಿಷನರವರು ಅಂಥಾ ನಿಕ್ಷೇಪವನ್ನು ಉಳಿಸಿಟ್ಟುಕೊಂಡು ಸದರೀ ವಿಚಾರ ಸಿವಿಲ್ ಕೋರ್ಟಿನಲ್ಲಿ ವಿಚಾರಣೆಯಾಗಿ ಇತ್ಯರ್ಥವಾಗುವ ಉದ್ದಿಶ್ಯ ತಪ್ಪದ ನಡವಳಿಕೆಗಳನ್ನು ನಿಲ್ಲಿಸಿರುತ್ತೆಂದು ಹುಕುಂ ಮಾಡಬೇಕು.

(1878ನೆ ಇಸವಿಯ 6ನೆ ನಂ. ಕಾನೂನಿನ 14ನೆಯ ಪ್ರಕರಣ.)

ಅಂಥಾ ವಿವಾದದ ತೀರ್ಮಾನ.

14. ಹೀಗೆ ಹಾಜರಾಗಿ ತನ್ನ ಹಕ್ಕನ್ನು ಕುರಿತು ವಾದಿಸಿದ ಯಾವ ಮನುಷ್ಯನಾದರೂ ಮೇಲ್ಕಂಡಂತೆ ಡೆಪ್ಯೂಟಿ ಕಮಿಷನರವರು ಹುಕುಂ ಮಾಡಿದ ತಾರೀಖು ಉಳಿಯಿತು ಒಂದು ತಿಂಗಳೊಳಗಾಗಿ ತನಗಿರುವ ಹಕ್ಕಿನ ವಿಚಾರವಾಗಿ ಸಿವಿಲ್ ಕೋರ್ಟಿನಲ್ಲಿ ದಿಕ್ರಿ ಪಡೆಸಿಲು ದಾವಾ ಹಾಕುಬಹುದು; ಮತ್ತು ಇಂಥಾ ಪ್ರತಿ ದಾವೆಯಲ್ಲಿಯೂ ನಿಕ್ಷೇಪವು ಯಾರಿಗೆ ಸಿಕ್ಕಿತೋ ಅವನನ್ನೂ ಡೆಪ್ಯೂಟಿ ಕಮಿಷನರವರ ರೂಬರೂಬ್ ಹಾಜರಾಗಿ ತಮತಮಗಿರುವ ಹಕ್ಕಿನ ವಿಚಾರದಲ್ಲಿ ವಿವಾದ ಮಾಡಿದವರನ್ನೂ ಪ್ರತಿವಾದಿಗಳನ್ನಾಗಿ ಮಾಡಿಕೊಳ್ಳಬೇಕು.

ತದನಂತರ ಹಕ್ಕು ಸ್ಥಾಪಿಸಿಕೊಡುವುದು.

15. (1) ಮೇಲ್ಕಂಡ ರೀತಿಯಾಗಿ ಏನಾದರೂ ದಾವೆಯು ದಾಖಲಾಗಿ ವಾದಿಯ ಹಕ್ಕು ಅಟ್ಟೆರಾಗಿ ಸ್ಥಾಪಿತವಾದಲ್ಲಿ, ಡೆಪ್ಯೂಟಿ ಕಮಿಷನರವರು, 12ನೆಯ ಪ್ರಕರಣದ ನಿಯಮಗಳಿಗೊಳಪಟ್ಟು ಸದರಿ ನಿಕ್ಷೇಪವನ್ನು ವಾದಿಗೂ, ಅದು ಯಾರಿಗೆ ಸಿಕ್ಕಿತೋ ಅವನಿಗೂ, ಹಂಚಬೇಕು.

(2) ಹಿಂದೆ ಹೇಳಿರುವ ರೀತಿಯಲ್ಲಿ ದಾವೆ ಯಾವುದೂ ದಾಖಲಾಗದೆ ಇದ್ದರೆ, ಅಥವಾ, ಇಂಥಾ ದಾವೆಗಳೆಲ್ಲವುಗಳಲ್ಲಿ ವಾದಿಗಳ ಹಕ್ಕುಗಳನ್ನು ಅಟ್ಟೆರಾಗಿ ತೀರಸ್ಕರಿಸಿದ್ದರೆ ಡೆಪ್ಯೂಟಿ ಕಮಿಷನರವರು ಸದರೀ ನಿಕ್ಷೇಪವನ್ನು 16ನೆಯ ಪ್ರಕರಣದ ನಿಯಮಗಳಿಗೊಳಪಟ್ಟು ಅದು ಸಿಕ್ಕಿದವನಿಗೇನೇ ಕೊಡಬೇಕು.

(1867ನೆ ಇಸವಿಯ ನಿಕ್ಷೇಪಸಂಬಂಧವಾದ ನಿಯಮಗಳ 6ನೆಯ ಪ್ರಕರಣ, ಬದಲಾವಣೆ ನಿಶಿ.)

ನಿಕ್ಷೇಪದ ಕಿಮ್ಮತ್ತು ಒಂದು ಲಕ್ಷ ರೂಪಾಯಿಗೆ ಮೀರಿದರೆ, ಕಂಡು ಹಿಡಿದವನಿಗೆ ಒಂದು ಲಕ್ಷ ಕೊಟ್ಟು, ಆಪೂರ್ ಸರಿಹೆಗ್ಗಳ್ಳಿ ಉಳಿದುದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳೋಣ.

16. 11ನೆಯ ಪ್ರಕರಣದಲ್ಲಿ ಅಥವಾ 15ನೆಯ ಪ್ರಕರಣದ 2ನೆ ಬಳಿ ಪ್ರಕರಣದಲ್ಲಿ ನಿಕ್ಷೇಪದ ಮೊಬಲಗು ಅಥವಾ ಅದರ ಕಿಮ್ಮತ್ತಿನ ಮೊಬಲಗು ಒಂದು ಲಕ್ಷ ರೂಪಾಯಿಗಳಿಗೆ ಮೀರಿದರೆ, ಡೆಪ್ಯೂಟಿ ಕಮಿಷನರವರು ಒಂದು ಲಕ್ಷ ರೂಪಾಯಿ ಮೊಬಲಗನ್ನು ಅಥವಾ ಆ ಮೊಬಲಗಿನ ಕಿಮ್ಮತ್ತುಳ್ಳ ನಿಕ್ಷೇಪದ ಭಾಗವನ್ನು ಕಂಡುಹಿಡಿದವನಿಗೆ ಕೊಟ್ಟುಬಿಟ್ಟು ಉಳಿದುದನ್ನು ಸರ್ಕಾರಕ್ಕೆ ಸೇರಿಸಿಕೊಂಡಿರುವುದಾಗಿ ತಿಳಿಸಬೇಕು.

(1878ನೆ ಇಸವಿಯ 6ನೆ ನಂ. ಕಾನೂನಿನ 16ನೆಯ ಪ್ರಕರಣ.)

ಸರ್ಕಾರಕ್ಕೋಸ್ಕರ ನಿಕ್ಷೇಪವನ್ನು ಪಡೆದುಕೊಳ್ಳುವ ಅಧಿಕಾರ.

17. 9ನೆಯ ಪ್ರಕರಣಕ್ಕನುಗುಣವಾಗಿ ಡೆಪ್ಯೂಟಿ ಕಮಿಷನರವರು ಈ ಕ್ರಮ ಮಾಡಿದನಂತರ ಹಿಂದೆಯೇ ಹೇಳಿರುವಮೇರೆಗೆ ಸದರೀ ನಿಕ್ಷೇಪವನ್ನು ಪಾವತಿ ಮಾಡುವುದಕ್ಕೆ ಮುಂಚೆ ಅಥವಾ ಹಂಚಿಕೆಮಾಡುವುದಕ್ಕೆ ಮುಂಚೆ ಯಜಮಾನುವಾದ ರೂ ನಿಕ್ಷೇಪವೆಲ್ಲವನ್ನಾಗಲೀ ಅಥವಾ ಅದರ ಒಂದು ಕ್ಲುಪ್ತಭಾಗವನ್ನಾಗಲೀ, ಅದರ ಬೆಲೆಯ ಮೊಬಲಗಿನ ಜತೆಗೆ ಆ ಮೊಬಲಗಿನ ಏದರಲ್ಲಿ ಒಂದು ಭಾಗದಷ್ಟು ಹಣವನ್ನು ಜಾಸ್ತಿಯಾಗಿ ಬಾಧ್ಯತೆಯುಳ್ಳವರಿಗೆ ಪಾ

instalment fixed under Rule V, so as to ensure repayment of the loan within the period for which the work is likely to last. In such cases the original loan order shall be cancelled and a fresh order issued, the former being recovered from the borrower, if possible.

Registers and Accounts.

XXXIII. Every sanctioning officer shall keep a register of applications received and disposed of by him in Form No. 2 hereto annexed.

XXXIV. Every Amildar (including Deputy Amildar) shall keep a register of loans and repayments relating to his taluk in Form No. 11 hereto annexed and such other accounts and statements as may, from time to time, be prescribed by Government. A duplicate of this register shall also be maintained in the office of the Assistant Commissioner in charge of the taluk and in that of the Deputy Commissioner.

Loans for Improvement of a special nature.

XXXV. The Government may, in the case of improvement of a specified kind or kinds, pass special rules for the grant of loans for them, and except to the extent expressly provided for by such special rules, these rules shall apply to the grant and recovery of all such loans.

By Order,

K. S. CHANDRASEKHARA AIYAR,

Secy. to Govt., Gen. & Rev. Depts.

232

(1867ನೆ ಇಸವಿಯ ಮೇ 4ನ ತಾರೀಖಿನ
ಮೈಸೂರು ಗೆಜೆಟ್ಟಿನ 119ನೆ ಪುಟ
ದಲ್ಲಿ ಪ್ರಕಟಿಸಿದೆ).

ಉದ್ದೇಶ ಮತ್ತು ಕಾರಣಗಳ ವಿವರಣೆ.

ನಿಕ್ಷೇಪದ ವಿಚಾರವಲ್ಲಿ ಚೀಫ್ ಕಮಿಷನರವರ 1867ನೆ ಇಸವಿಯ ಏಪ್ರಿಲ್ 17ನೆ ತಾರೀಖಿನ 4ನೆ ನಂಬರ್ ಇಸ್ತಿಹಾರ್ ಯೊಡನೆ ಪ್ರಸಿದ್ಧಪಡಿಸಿರುವ ನಿಬಂಧನೆಗಳೇ ಈಗಲೂ ಮೈಸೂರು ಸೀಮೆಯಲ್ಲಿ ಜಾರಿಯಲ್ಲಿವೆ. ಈ ನಿಬಂಧನೆಗಳನ್ನು ಕೊಡಿನ 1872ನೆ ಇಸವಿಯ 11ನೆ ರೆಗ್ಯುಲೇಷನಿಗೆ ಅನುಸಾರವಾಗಿ ಮಾಡಲಾಗಿತ್ತು. ಆದರೆ ಚೀಫ್ ಕಮಿಷನರು ಇಂಡಿಯಾ ಸರ್ಕಾರದವರ ಮಂಜೂರಾತಿಯನ್ನು ಪಡೆಯದೆ ಸದರೀ ನಿಬಂಧನೆಗಳನ್ನು ಪ್ರಸಿದ್ಧಪಡಿಸಿದ್ದರಿಂದ ಅವುಗಳು ಎಷ್ಟರಮಟ್ಟಿಗೆ ನ್ಯಾಯಸಮ್ಮತವಾದುವೆಂಬುದು ಯೋಚಿಸಬೇಕಾದ ಅಂಶವೇ ಸರಿ. ಅಲ್ಲದೆ ಆ ನಿಬಂಧನೆಗಳನ್ನು ಆಚರಣೆಗೆ ತರುವುದು ಅಸಾಧ್ಯವಾಗಿಯೂ, ಕೆಲವು ಭಾಗಗಳಲ್ಲಿ ಅನ್ವಯಗಳು ಈಗಿನ ಕಾಲಸ್ಥಿತಿಗೆ ತಕ್ಕ ಪುಗಳಲ್ಲವಾಗಿಯೂ ಕಂಡುಬಂದಿದೆ. ಈ ಕಾರಣಗಳಿಂದ ಪ್ರಕೃತ ರೆಗ್ಯುಲೇಷನ್ನನ್ನು ಏರ್ಪಡಿಸುವುದು ಅವಶ್ಯಕವಾಗಿದೆ.

2. (1877ನೆ ಇಸವಿಯ 6ನೆ) ಇಂಡಿಯಾ ದೇಶದ ನಿಕ್ಷೇಪದ ಆಕ್ಟಿನ ಆಧಾರದ ಮೇಲೆ ಈ ಮಸೂದೆ ರೆಗ್ಯುಲೇಷನ್ನನ್ನು ಏರ್ಪಡಿಸಿದೆ. ಆದರೆ ಕೆಲವು ವಿಷಯಗಳಲ್ಲಿ ಮಾತ್ರ ಈ ಮಸೂದೆಗೂ ಇಂಡಿಯಾ ಆಕ್ಟಿಗೂ ವ್ಯತ್ಯಾಸಗಳಿವೆ.

3. ನಿಕ್ಷೇಪವನ್ನು ಕಂಡುಹಿಡಿದವರಿಗೂ, ನಿಕ್ಷೇಪದಲ್ಲಿ ಬಾಧ್ಯತೆ ಇರುವ ಇತರರಿಗೂ ಎಷ್ಟರಮಟ್ಟಿಗೆ ಸದರೀ ನಿಕ್ಷೇಪದಲ್ಲಿ ಹಕ್ಕು ಇರುತ್ತದೆ-ಇದನ್ನು ನಿರ್ಣಯಿಸುವದೇ ಈ ರೆಗ್ಯುಲೇಷನಿನ ಉದ್ದೇಶವು ಈ ರೆಗ್ಯುಲೇಷನಿನಲ್ಲಿ ನಿಕ್ಷೇಪ ನಿಕ್ಕಿದ ಸಮಾಚಾರವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ವಿಧಿಸಿ ಇರುತ್ತದೆ, ಮತ್ತು ಸದರೀ ನಿಕ್ಷೇಪವು ಹಿಂದೆ ಬಹುಕಾಲದಿಂದಲೂ ತಮ್ಮ ಸ್ವತ್ತೆಂದು ಸ್ಥಾಪಿಸಬಲ್ಲ ಎಲ್ಲಾ ಜನಗಳ ಹಕ್ಕನ್ನೂ ಇದರಲ್ಲಿ ಅಂಗೀಕರಿಸಿ ಭದ್ರಪಡಿಸಿರುತ್ತದೆ. ಸದರೀ ನಿಕ್ಷೇಪವನ್ನು ನೂರು ವರ್ಷಗಳೊಳಗಾಗಿಯೇ ಒಚ್ಚಿಡಲಾಗಿತ್ತೆಂದು ಊಹಿಸುವುದಕ್ಕೆ ತಕ್ಕ ರುಜುವಾತು ಬಂದಿರುವಂಥಾ ಸಂದರ್ಭಗಳಲ್ಲಿ ಮಾತ್ರ ಸದರೀ ಪೂರ್ವದಿಂದ ಬಂದಿರುವ ಹಕ್ಕನ್ನು ಸ್ಥಾಪಿಸುವುದಾಗಿದೆ. ಅಂಥಾ ಹಕ್ಕು ಬಾಧ್ಯತೆಯನ್ನು ಸ್ಥಾಪಿಸುವುದಕ್ಕೆ ಆಗದೆ ಇದ್ದರೆ, ನಿಕ್ಷೇಪವು ಯಾರಿಗೆ ಸಿಕ್ಕಿತೋ ಅವನಿಗೂ, ನಿಕ್ಷೇಪ ದೊರೆತ ಭೂಮಿಯ ಮಾಲೀಕನಿಗೂ ಸದರೀ ನಿಕ್ಷೇಪದಲ್ಲಿ ಇರುವ ಹಕ್ಕನ್ನು ನಿಕ್ಕಯಿಸುವುದಕ್ಕೆ ರೆಗ್ಯುಲೇಷನ್ನಲ್ಲಿ ಕ್ರಮಗಳನ್ನು ವಿಧಿಸಿ ಇದೆ. ನಿಕ್ಷೇಪದ ಹಕ್ಕು ಬಾಧ್ಯತೆ ವ್ಯಾಜ್ಯಗಳೂ, ಮತ್ತು ಜಮೀನ್ದಾರ ಮಾಲೀಕನು ಯಾರೆಂಬ ವಿಷಯವಾಗಿ ಹುಟ್ಟುವ ಎಲ್ಲಾ ವಿವಾದಗಳೂ ಸಿವಿಲ್ ಕೋರ್ಟಿನಲ್ಲಿ ಫೈಸಲಾಗತಕ್ಕ ವ್ಯಗಳಾಗಿವೆ.

ನಿಕ್ಷೇಪದ ಮೊತ್ತ ಅಥವಾ ಬೆಲೆಯು ಒಂದು ಲಕ್ಷ ರೂಪಾಯಿಗಳಿಗೆ ಮಿಗಿಲಾದುವಾಗಲೂ, ನಿಕ್ಷೇಪವು ಯಾರಿಗೆ ಸಿಕ್ಕಿತೋ ಅತನು ಹೊರತಾಗಿ ಮತ್ತಾರೂ ಆ ನಿಕ್ಷೇಪದ ಬಂದು ಹಿಸ್ಸಾಗೆ ತಮ್ಮ ಬಾಧ್ಯತೆಯನ್ನು ಸ್ಥಾಪಿಸದೆ ಇರುವಾಗಲೂ ಸದರೀ ನಿಕ್ಷೇಪವನ್ನು ಕಂಡವನಿಗೆ ಬಂದು ಲಕ್ಷ ಕೊಟ್ಟು ಉಳಿದುದನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುತ್ತದೆ. ನಿಕ್ಷೇಪದ ವಾಸ್ತವಿಕ ಬೆಲೆಯನ್ನೂ ಮತ್ತು ಅದರಲ್ಲಿ ಇದರಲ್ಲಿ ಬಂದುಭಾಗ ಹೆಚ್ಚು ಹಣವನ್ನೂ ಸಹಾ ಕೊಟ್ಟು ಸದರಿ ನಿಕ್ಷೇಪವನ್ನು ತಮಗೇನೇ ಉಳಿಸಿಕೊಳ್ಳುವ ಅಧಿಕಾರವನ್ನು ಕೂಡಾ ಸರ್ಕಾರದವರಿಗೆ ಇರುತ್ತದೆ.

4. ಈ ಮಸೂದೆ ರೆಗ್ಯುಲೇಷನಿನಲ್ಲಿ ನಡವಳಿಕೆ ಬಗ್ಗೆ ಇದರಡಿ ಕಂಡ ಕ್ರಮವನ್ನು ವಿಧಿಸಿರುತ್ತದೆ :—

(a) ನಿಕ್ಷೇಪವನ್ನು ಕಂಡವನು ಡಿಪ್ಯೂಟಿ ಕಮಿಷನರಿಗೆ ವರ್ತಮಾನ ಕೊಡತಕ್ಕದ್ದು.

(b) ಡಿಪ್ಯೂಟಿ ಕಮಿಷನರವರು ನಿಕ್ಷೇಪವು ಎಲ್ಲಿ ದೊರಕಿತೋ ಅಂಥಾ ಜಮೀನಿನ ಮಾಲೀಕ ಅಥವಾ ಮಾಲೀಕರಿಗೆ ವರ್ತಮಾನ ಕೊಡತಕ್ಕದ್ದು.

(c) ನಿಕ್ಷೇಪ ದೊರೆತ ಸಮಾಚಾರವನ್ನು ಪ್ರಸಿದ್ಧಪಡಿಸಿ ಬಾಧ್ಯಸ್ಥರೆಲ್ಲರೂ 6 ತಿಂಗಳೊಳಗಾಗಿ ಹಾಜರಾಗಬೇಕೆಂತ ತಿಳಿಸತಕ್ಕದ್ದು.

(d) ಸ್ಥಾಂ ನಿಕ್ಷೇಪಕ್ಕಾಗಲೀ ಅಥವಾ ಅದರಲ್ಲಿ ಒಂದು ಹಿಸ್ಸೆಗಾಗಲಿ ತಂದ ಹಕ್ಕುಗಳನ್ನು ವಿಚಾರಣೆ ಮಾಡತಕ್ಕದ್ದು.

5. ಈ ಮಸೂದೆ ರೆಗ್ಯುಲೇಷನಿಗೂ 1877ನೆ ಇಸವಿಯ 6ನೆ ಆಕ್ಟಿಗೂ ಈ ಕೆಳಗೆ ಕಂಡ ಅಂಶಗಳಲ್ಲಿ ವ್ಯತ್ಯಾಸಗಳಿವೆ :—

(a) ನಿಕ್ಷೇಪವನ್ನು ಕಂಡವನ್ನುದ ಇತರರ್ಯಾರೂ ಆದರೆಲ್ಲ ಬಂದು ಹಿಸ್ಸೆಗೆ ತಮ್ಮ ಹಕ್ಕನ್ನು ಸ್ಥಾಪಿಸದೆ ಹೋದರೆ, ಒಂದು ಲಕ್ಷಕ್ಕಿಂತಲೂ ಹೆಚ್ಚಾದ ಮೊಬಲಗನ್ನು ಸರ್ಕಾರಕ್ಕೆ ಇಟ್ಟುಕೊಳ್ಳುವುದು (17ನೆ ಪ್ರಕರಣ). ಇಂಡಿಯಾ ದೇಶದ ಆಕ್ಟಿನಲ್ಲಿ ಇಂಥಾ ನಿಯಮವು ಇಲ್ಲದೆ ಇದ್ದರೂ, ಈ ಅಂಶವನ್ನು ಚೀಫ್ ಕಮಿಷನರವರ ನಿಬಂಧನೆಗಳಿಂದ ತೆಗೆದುಕೊಂಡು ಇದೆ.

(b) ಇಂಡಿಯಾ ಆಕ್ಟು ಪ್ರಕಾರ ನಿಕ್ಷೇಪ ಕಂಡವನಿಗೆ ಮೂರು ಪಾಲೂ, ಜಮೀನು ಮಾಲೀಕನಿಗೆ ಒಂದುಪಾಲೂ ದೊರುತ್ತದೆ. ಈ ಉಭಯತ್ರರಿಗೂ ಸಮಪಾಲು ಕೊಡುವುದು ಇನ್ನೂ ನ್ಯಾಯ ಸಮ್ಮತವಾಗಿರುತ್ತದೆಂದು ಎಣಿಸಿ ಅದರಂತೆಯೇ ಈ ರೆಗ್ಯುಲೇಷನಿನಲ್ಲಿ ಏರ್ಪಾಟು ಮಾಡಿ ಇದೆ. (12ನೆ ಪ್ರಕರಣ)

(c) 12ನೆ ಪ್ರಕರಣದ ಪ್ರಕಾರ ಡಿಪ್ಯೂಟಿ ಕಮಿಷನರವರು ನಿಕ್ಷೇಪವನ್ನು ಮಾರಬೇಕಾದಾಗ ಅದನ್ನು ಹೇಗೆ ಮಾರಬೇಕು ಎಂಬ ವಗೈರೆ ತಪಶೀಲು ವಿಷಯದಲ್ಲಿ ಅವರು ಸರ್ಕಾರದವರ ಅಪ್ಪಣೆ ಪಡೆಯಬೇಕಾಗಿದೆ.

(d) ನಿಕ್ಕಿದ ನಿಕ್ಷೇಪವನ್ನು ಕುರಿತು ಈ ರೆಗ್ಯುಲೇಷನಿನಲ್ಲಿ ನಿಯಮವನ್ನು ಏರ್ಪಡಿಸದೆ ಇರುವ ವಿಷಯಗಳೆಲ್ಲಾ ಅವಶ್ಯಕವಾದ ನಿಯಮಗಳನ್ನು ಏರ್ಪಡಿಸುವ ಅಧಿಕಾರವು ಸರ್ಕಾರದವರಿಗೇನೇ ಇರುತ್ತದೆ.

ಎಲ್ಲಾ ತರಹದ ವಿಷಪದಾರ್ಥಗಳನ್ನೂ ಕೆಲವು ಸ್ಥಳಗಳಲ್ಲಿ ಸ್ವಾಧೀನದಲ್ಲಿಟ್ಟುಕೊಂಡಿರುವುದು, ಬಿಕರಿ ಮಾಡುವುದು, ಮುಖ್ಯವಾಗಿ ಇಲೀ ಪಾಷಾಣವನ್ನು (White arsenic) ಆಮದು ಮಾಡಿಕೊಳ್ಳುವುದು, ಸ್ವಾಧೀನದಲ್ಲಿಟ್ಟುಕೊಂಡಿರುವುದು ಮತ್ತು ಮಾರುವುದು ಇವುಗಳನ್ನು ಕ್ರಮ ಪಡಿಸುವಬಗ್ಗೆ ಹುಟ್ಟಿದ ಬಿಲ್ಲು.

ಕೆಲವು ಸ್ಥಳಗಳಲ್ಲಿ ಎಲ್ಲಾತರಹ ವಿಷಪದಾರ್ಥಗಳನ್ನೂ ಸ್ವಾಧೀನದಲ್ಲಿಟ್ಟುಕೊಳ್ಳುವುದು, ಬಿಕರಿ ಮಾಡುವುದು, ಇವುಗಳಲ್ಲಿ ಮೈಸೂರು ಸೀಮೆಯ ಎಲ್ಲಾ ಪ್ರದೇಶಗಳಲ್ಲಿಯೂ ಇಲೀ ಪಾಷಾಣವನ್ನು ಆಮದು ಮಾಡೋಣ ಸ್ವಾಧೀನದಲ್ಲಿಟ್ಟುಕೊಳ್ಳೋಣ ಮತ್ತು ಬಿಕರಿ ಮಾಡೋಣ—ಇವುಗಳನ್ನೂ ಕ್ರಮಪಡಿಸುವುದು ಯುಕ್ತವಾಗಿರುವುದೆಂದು ಶ್ರೀಮನ್ ಮಹಾರಾಜಾ ಸಾಹೇಬ ಬಹದ್ದೂರವರು ಈ ಕೆಳಗೆ ಕಂಡಂತೆ ಕಾನೂನನ್ನು ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಚಿಕ್ಕ ಹೆಸರು ಮತ್ತು ವ್ಯಾಪ್ತಿ.

1. (1) ಈ ಕಾನೂನನ್ನು "1908 ನೆ ಇಸವಿಯ ಮೈಸೂರು ವಿಷಪದಾರ್ಥಗಳ ರೆಗ್ಯುಲೇಷನ್" ಎಂಬುದಾಗಿ ಕರೆಯಬಹುದು.

(2) ಅದು ಮೈಸೂರು ಸೀಮೆಗೆಲ್ಲ ವ್ಯಾಪಿಸುತ್ತದೆ.

ವಿಷಪದಾರ್ಥಗಳು.

2. (1) ಯಾವ ಮ್ಯುನಿಸಿಪಾಲಿಟಿಯ ಸರಹದ್ದಿನಲ್ಲಿ ಬೇಕಾದರೂ ಫಲಾಕೆಲವು ಪ್ರದೇಶಗಳಲ್ಲಿ ಯಾವ ವಿಷಪದಾರ್ಥವನ್ನು ವ್ಯಾಪಾರದ ಬಗ್ಗೆ ಸ್ವಾಧೀನದಲ್ಲಿಟ್ಟುಕೊಂಡಿರುವುದನ್ನೂ ಬರ್ಥವನ್ನಾದರೂ ಬಿಕರಿ ಬಗ್ಗೆ ಸ್ವಾಧೀನದ ಟ್ರಾಗಿಯಾಗಲೀ ಅಥವಾ ಚಿಲ್ಲರೆಯಾಗಿ ಆಗಲೀ ಮಾರುವುದನ್ನೂ ನಿಬಂಧನೆಯು ಮೂಲಿಟ್ಟುಕೊಂಡಿರುವುದನ್ನೂ ಮತ್ತು ಮಾರು ಲಕ ಸರ್ಕಾರದವರು ಕ್ರಮಪಡಿಸಬಹುದು.

ವುದನ್ನೂ ಕ್ರಮಪಡಿಸುವ ಅಧಿಕಾರ.

(2) ಈ ಬಂದನೆ ಬಳಕಲಮಿನಿಂದ ಕೊಡೋಣವಾದ ಸಾಮಾನ್ಯಾಧಿಕಾರಕ್ಕೆ ಕುಂದಕವಿಲ್ಲದಂತೆ ಅವಕ್ಕನುಸಾರವಾಗಿ ಈ ಕೆಳಗೆ ಕಂಡ ವಿಷಯಗಳಿಗೂ ಇತರ ವಿಷಯಗಳಿಗೂ ನಿಬಂಧನೆಗಳನ್ನು ಮಾಡಬಹುದು:—

(ಎ) ಫಲಾನೆ ವಿಷಪದಾರ್ಥವನ್ನು ಒಟ್ಟಾಗಿ ಆಗಲೀ ಚಿಲ್ಲರೆಯಾಗಿ ಆಗಲೀ ಮಾರುವಬಗ್ಗೆ ಸ್ವಾಧೀನದಲ್ಲಿಟ್ಟುಕೊಳ್ಳಲು ಲೈಸೆನ್ಸ್ ಕೊಡುವುದು. ಈ ಲೈಸೆನ್ಸಿಗೆ ಅವಶ್ಯವಿದ್ದರೆ ರುಸುವನ್ನು ನಿಶ್ಚಯಿಸೆ ಮಾಡುವುದು,

(ಬಿ) ಯಾವ ಯಾವ ತರಗತಿಯ ಜನರಿಗೆ ಮಾತ್ರ ಈ ಲೈಸೆನ್ಸುಗಳನ್ನು ಕೊಡಬಹುದೆಂಬುದು,

(ಸಿ) ಯಾವ ಯಾವ ತರಗತಿಯ ಜನರಿಗೆ ಮಾತ್ರ ಇಂಥಾ ವಿಷಪದಾರ್ಥವನ್ನು ಮಾರಬಹುದೆಂಬುದನ್ನು,

(ಡಿ) ಯಾವನಾದರೂ ಒಬ್ಬ ಮನುಷ್ಯನಿಗೆ ಈ ವಿಷಪದಾರ್ಥವನ್ನು ಪರಮಾವಧಿ ಎಷ್ಟರವರೆಗೆ ಮಾರಬಹುದು,

(ಇ) ಈ ವಿಷಪದಾರ್ಥವನ್ನು ಮಾರತಕ್ಕವರು ಇಡಬೇಕಾದ ಬಿಕರಿ ರಿಜಿಸ್ಟರುಗಳನ್ನೂ, ಅವುಗಳಲ್ಲಿ ಕೂಡಿಸಬೇಕಾದ ತಪ್ಸೀಲುಗಳನ್ನೂ ಮತ್ತು ಆ ರಿಜಿಸ್ಟರುಗಳನ್ನು ತಪಾಸಣೆ ಮಾಡುವುದು,

(ಎಫ್) ಈ ವಿಷವಸ್ತುಗಳನ್ನು ಹುಷಾರಾಗಿಟ್ಟುಕೊಂಡಿರೋಣ ಮತ್ತು ಮಾರಾಟಕ್ಕಿಟ್ಟಿರುವ ಆಹಾರವಸ್ತುಗಳನ್ನು ಕೆಡದಿರುವ ಉದ್ದೇಶ್ಯ ಸ್ವಾಧೀನದಲ್ಲಿಟ್ಟುಕೊಂಡಿರುವ ಪಾಷಾಣಗಳನ್ನಿಟ್ಟಿರತಕ್ಕ ಪಾತ್ರೆಗಳಮೇಲೂ, ಬಸ್ತುಗಳಮೇಲೂ, ಪೊಟ್ಟಣಗಳಮೇಲೂ ಹೆಸರುಬರೆದು ಚೀಟಿಗಳನ್ನು ಅಂಟಿಸೋಣವೂ,

(ಜಿ) ಮಾರಾಟಕ್ಕೋಸ್ಕರ ಇಂಥಾ ಅಂಗಡಿಯವನು ಇಟ್ಟುಕೊಂಡಿರಬಹುದಾದ ಯಾವ ವಿಷಪದಾರ್ಥವನ್ನೇ ಆಗಲಿ ಅಪಮಾಯಿಷಿಮಾಡಿ ಪರಿಶೋಧಿಸುವುದು.

(3) ಈ ಪ್ರಕರಣಕ್ಕನುಗುಣವಾಗಿ ಮಾಡೋಣಾದ ನಿಬಂಧನೆಯಲ್ಲಿ ವಿಷಪದಾರ್ಥವೆಂದು ನಮೂದಾಗಿರದ ಪ್ರತಿ ವಸ್ತುವನ್ನೂ ಈ ಕಾನೂನಿನ ಉದ್ದೇಶಗಳಿಗೆ ವಿಷಪದಾರ್ಥವೆಂದು ಭಾವಿಸಬೇಕು.

ಇಲೀ ಪಾಷಾಣ (White arsenic).

ಲೈಸೆನ್ಸ್ ಇದ್ದ ಹೊರತು ಮೈಸೂರು ಸೀಮೆಯೊಳಕ್ಕೆ ಇಲೀ ಪಾಷಾಣ ಆಮದು ಮಾಡಿಕೊಳ್ಳುವುದನ್ನು ನಿರೋಧ ಮಾಡುವ ಅಧಿಕಾರ.

3. ಲೈಸೆನ್ಸ್ ಪಡೆಮಾಡಿಕೊಂಡು ಆದರಲ್ಲಿನ ಮೊದಿರುವ ಷರತ್ತುಗಳಿಗೆ ಅನುಸಾರವಾಗಿದ್ದು ಹೊರತು ಇಲಿ ಪಾಷಾಣವನ್ನು ಮೈಸೂರು ಸೀಮೆಯೊಳಕ್ಕೆ ತರಿಸಿಕೊಳ್ಳಕೂಡದೆಂದು ಸರ್ಕಾರದವರು ತನ್ನ ಗೆಜೆಟಿನಲ್ಲಿ ಇಸ್ತಿಹಾರ್ನಾಮೆಯನ್ನು ಪ್ರಸಿದ್ಧಪಡಿಸಬಹುದು; ಮತ್ತು ಈ ಪ್ರಕರಣದವೇರೆಗೆ ಹುಟ್ಟುವ ನಿಬಂಧನೆಯಲ್ಲಿ ಲೈಸೆನ್ಸ್ ಕೊಡುವುದನ್ನು ಕ್ರಮಪಡಿಸಿ ಷರತ್ತುಗಳನ್ನು ವಿಧಾಯಕವಾಗಿಡಬಹುದು.

ಸಂಸ್ಥಾನದಲ್ಲೆಲ್ಲಾ ಇಲೀ ಪಾಷಾಣವನ್ನು ಮಾರಾಟಕ್ಕೆ ಇಟ್ಟುಕೊಳ್ಳುವುದನ್ನೂ ಮತ್ತು ಮಾರುವುದನ್ನೂ ಕ್ರಮ ಪಡಿಸುವ ಅಧಿಕಾರ.

4. (1) ಮೈಸೂರು ಸೀಮೆಯ ಎಲ್ಲಾ ಭಾಗಗಳಲ್ಲಿ ಆಗಲೀ ಅಥವಾ ಕೆಲವು ಪ್ರದೇಶಗಳಲ್ಲಿ ಆಗಲೀ ಇಲಿ ಪಾಷಾಣವನ್ನು ಮಾರಾಟಕ್ಕೋಸ್ಕರ ಸ್ವಾಧೀನದಲ್ಲಿಟ್ಟುಕೊಂಡಿರುವುದನ್ನೂ, ಒಟ್ಟಾಗಿ ಅಥವಾ ಚಿಲ್ಲರೆಯಾಗಿ ಮಾರುವುದನ್ನೂ ಕ್ರಮಪಡಿಸುವುದಕ್ಕೂ ಸಹ ಸರ್ಕಾರದವರು ನಿಬಂಧನೆ ಮಾಡಬಹುದು.

234

(2) ಈ ಬಂದನೆ ಬಳಕಲಮಿನಿಂದ ಕೊಡೋಣಾದ ಸಾಮಾನ್ಯಾಧಿಕಾರಕ್ಕೆ ಕುಂದುಕವಿಲ್ಲದಂತೆ, ಅದಕ್ಕನುಸಾರವಾಗಿ 2ನೆಯ ಪ್ರಕರಣದ 2)ನೆಯ ಬಳಕಪ್ರಕರಣದಲ್ಲಿ ನಮೂದಿಸಿರುವ ಎಲ್ಲಾ ಅಥವಾ ಯಾವ ವಿಷಯಗಳಿಗಾದರೂ, ಇತರ ವಿಷಯಗಳಿ ಾದರೂ ನಿಯಮಗಳನ್ನು ಮಾಡಬಹುದು.

(3) ಬಂದನೆಯ ಬಳಕಪ್ರಕರಣದವೇರೆ ಮಾಡಿದ ನಿಬಂಧನೆಗಳಲ್ಲಿ ಈ ಕೆಳಗೆ ಕಂಡ ಅಂಕಕ್ಕೂ ಸಹ ಆಧಾರಮಾಡಬ ದು. ಪುಡಿಮಾಡಿರುವ ಇಲೀ ಪಾಷಾಣದಜೊತೆಗೆ ಹೊಗಮಿಂ ಯಾ ಕಪ್ಪನ್ನಾಗಲೀ, ನೀಲಿಮನ್ನಾಗಲೀ, ದೃಷ್ಯಬ್ಲೂ ಎಂಬ ಯನ್ನಾಗಲಿ ಬಂದು ಪಾನು ಇಲೀ ಪಾಷಾಣಕ್ಕೆ ಅಥವಾಪಕ್ಷ ಅರ್ಧ ಪೌನಿನಂತೆ ಮಾಣಟಕ್ಕೆ ಮುಂಜಿ ಮಿಶ್ರ ಮಾಡಿದ ಹೊರ ಯಾವ ಮನುಷ್ಯನೇ ಆಗಲಿ ಅದನ್ನು ಮಾರಕೂಡದು. ಈ ಪದಾರ್ಥಗಳನ್ನು ಇದೇ ದಾವಣಿಯಾ ವೇರೆಗೆ ಮಿಶ್ರ ಮಾಡಬೇಕು. ಪರಂತು ಇಲೀ ಪಾಷಾಣವನ್ನು ಕೊಂಡುಕೊಳ್ಳುವವನು ಈ ಪದಾರ್ಥವು ಇತರ ವಸ್ತುಗಳೊಂದಿಗೆ ಮಿಶ್ರವಾಗಿದ್ದರೆ ತನ್ನ ಕೆಲಸಕ್ಕೆ ಉಪಯೋಗಿಸುವುದಿಲ್ಲವೆಂದು ಹೇಳಿಕೊಳ್ಳುವ ಪಕ್ಷದಲ್ಲಿ ಈ ಪಾಷಾಣವನ್ನು ಇತರ ವಸ್ತುಗಳೊಡನೆ ಮಿಶ್ರಮಾಡದೇನೆ ಬಂದೊಂದು ಪಕ್ಷಕ್ಕೆ 10 ಪೌನುಗಳಿಗೆ ಕಮ್ಮಿ ಇಲ್ಲದಂತೆ ಮಾರಬಹುದು.

5. (1) ಯಾವ ಪ್ರದೇಶದಲ್ಲಿ ಇಲಿ ಪಾಷಾಣವನ್ನು ಹಾಕಿ ಬಿ ನಿ ಮಾಡೋಣವೂ, ಜಾನುವಾರುಗಳಿಗೆ ಸದರೀ ವಿಷವನ್ನು ಹಾಕಿ ಕೆಡಕು ಮಾಡೋಣವೂ ವಿಶೇಷವಾಗಿ ನಡೆಯುತ್ತಿರುವ ಸಬಬು ಈ ಪದಾರ್ಥವನ್ನು ಸ್ವಾಧೀನದಲ್ಲಿಟ್ಟುಕೊಂಡಿರಬೇಕಾದರೆ ನಿರ್ಬಂಧಗಳನ್ನು ಒಟುಮಾಡುವುದು ಅವಶ್ಯಕವೆಂದು ತೋರಬರುವುದೋ ಆ ಪ್ರದೇಶದಲ್ಲಿ ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದರ ವಿಷಯವಾಗಿ ಸರ್ಕಾರದವರು ನಿಯಮ ಮಾಡಬಹುದು.

ಕೆಲವು ಪ್ರದೇಶಗಳಲ್ಲಿ ಇಲೀ ಪಾಷಾಣವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದನ್ನು ಕ್ರಮಪಡಿಸುವ ಅಧಿಕಾರ

(2) ಈ ಬಂದನೆ ಬಳಕಪ್ರಕರಣದ ವೇರೆಗೆ ನಿಬಂಧನೆಯನ್ನು ಮಾಡುವಲ್ಲಿ ಸದರಿ ನಿಯಮವನ್ನು ಉಲ್ಲಂಘಿಸುವ ಮನುಷ್ಯನಿಗೆ ಬಂದು ವರ್ಷಕ್ಕೆ ಮಿರದ ಬಂದು ವಾಯಿದೆ ಪರ್ಯಂತ ಕೈದಿನಮೂಲಕವಾಗಲೀ, ಬಂದು ಸಾವಿರ ರೂಪಾಯಿವರೆಗೂ ಜುರ್ಮಾನೆಯ ಮೂಲಕವಾಗಲೀ ಅಥವಾ ಇವೆರಡರ ಮೂಲಕವಾಗಲೀ ಶಿಕ್ಷೆಯನ್ನು ವಿಧಿಸಲಾದೀತೆಂತಲೂ ಅಲ್ಲದೆಯೂ ಇಲಿಪಾಷಾಣದ ವಿಚಾರವಾಗಿ ಉಲ್ಲಂಘನೆ ತಕ್ಸೀರು ನಡೆಸಿದೇ ಇ ವಸ್ತುವ್ಯವತ್ತನ್ನೂ, ಅದನ್ನು ಇಟ್ಟಿದ್ದ ಪಾತ್ರೆಗಳೂ, ಬಸ್ತುಗಳೂ, ಪೊಟ್ಟಣಗಳೂ, ಮುಂತಾದುವುಗಳನ್ನೂ ಸರ್ಕಾರಕ್ಕೆ ಸೇರಿಸಿಕೊಳ್ಳಲಾದೀತೆಂತಲೂ ಸರ್ಕಾರದವರು ಹುಕುಂ ಮಾಡಬಹುದು.

ಇತರ ವಿಷಯಗಳು.

6. (1) ಈ ರೆಗ್ಯುಲೇಷನಿನಲ್ಲಿ ಇಲಿ ಪಾಷಾಣವೊಂದಕ್ಕೆ ಸಂಬಂಧಪಡಬೇಕೆಂಬದಾಗಿ ವಿಧಿಸಿರುವ ಎಲ್ಲಾ ನಿಯಮಗಳಾದರೂ ಆಗಲಿ ಅಥವಾ ಆ ಪೈಕಿ ಯಾವ ನಿಯಮವಾದರೂ ಆಗಲಿ ಇಲಿ ಪಾಷಾಣವಲ್ಲದೇ ಇರುವ ಫಲಾನಾ ಇತರ ವಿಷಪದಾರ್ಥಕ್ಕೆ ಅನ್ವಯಿಸಬೇಕೆಂಬದಾಗಿ ಸರ್ಕಾರದವರು, ತಮ್ಮ ಗೆಜೆಟ್ಟಿನಲ್ಲಿ ಬಂದು ಇಸ್ತಿಹಾರ್ನಾಮೆಯನ್ನು ಪ್ರಕಟಿಸುವುದರ ಮೂಲಕ ವಿಧಿಸಬಹುದು.

ಇತರ ವಿಷಪದಾರ್ಥಗಳಿಗೂ ಈ ರೆಗ್ಯುಲೇಷನು ಅನ್ವಯಿಸುವಂತೆ ಮಾಡಲು ಅಧಿಕಾರ.

(2) [illegible] ಪ್ರಕರಣದ ಪ್ರಕಾರ ಹುಟ್ಟುವ ಇಸ್ತಿಹಾರ್ನಾಮೆಯಲ್ಲಿ ಯಾವುದಾದರೂ ಬಂದು ಪದಾರ್ಥವು ವಿಷಪದಾರ್ಥವೆಂಬದಾಗಿ [illegible]ದಾಗಿದ್ದರೆ ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಸದರೀ ಪದಾರ್ಥವು ವಿಷಪದಾರ್ಥವಾಗಿದೆಯೆಂದೇ ಎಣಿಸಬೇಕು.

ದಂಡನೆಗಳು ಮತ್ತು ನಡವಳಿಕೆ.

7. (1) ಯಾರಾದರೂ—

(a) 2ನೇ ಪ್ರಕರಣದ ವೇರೆಗಾಗಲಿ 4ನೇ ಪ್ರಕರಣದ ವೇರೆಗಾಗಲೀ ಕಾನೂನಿಗೆ ವಿರೋಧವಾಗಿ ಆವುದು ಮಾ ಮಾಡಿದ ಯಾವ ನಿಬಂಧನೆಯನ್ನಾದರೂ ಉಲ್ಲಂಘಿಸಿದರೆ, ಅಥವಾ ಹುವುದು ಮೈರೆ ತಪ್ಪಿತಕ್ಕೆ ದಂಡನೆ.

(b) ಮೈಸೂರು ಸೀಮೆಯಲ್ಲಿ ಇಲೀ ಪಾಷಾಣವನ್ನು ಫಲಾನಾ ವಾಯಿದೆ ಪರ್ಯಂತ ಫಲಾನಾ ಲೈಸೆನ್ಸನ್ನು ಪಡೆದು ಕೊಂಡಾಗ ಮಾತ್ರವೇ ಆವುದು ಮಾಡಿಕೊಳ್ಳಬಹುದೆಂಬದಾಗಿ 3ನೇ ಪ್ರಕರಣದ ವೇರೆಗೆ ನಿರ್ಬಂಧಪಡಿಸಿರಲು ಲೈಸೆನ್ಸಿಲ್ಲದೆ ಅದನ್ನು ಆವುದು ಮಾಡಿಕೊಂಡರೆ, ಅಥವಾ

(c) ಇಲೀ ಪಾಷಾಣವನ್ನು ಆವುದುಮಾಡಿಕೊಳ್ಳುವ ಬಗ್ಗೆ 3ನೇ ಪ್ರಕರಣವನ್ನನುಸರಿಸಿ ತನಗೆ ಕೊಟ್ಟಿರುವ ಲೈಸೆನ್ಸಿನಲ್ಲಿ ಕಂಡ ಯಾವ ಷರತ್ತನ್ನಾದರೂ ಉಲ್ಲಂಘಿಸಿದರೆ,

ಅತನನ್ನು—

(i) ಅವನ ಮೇಲೆ ಮೊದಲನೇ ಸಲ ತಪ್ಪು ಸಾಬೀತಾದಾಗ, ಮೂರು ತಿಂಗಳಿಗೆ ಮಿರದ ಬಂದು ವಾಯಿದೆ ಪರ್ಯಂತ ಖೈದಿನ ಮೂಲಕವಾಗಲಿ, ಐನೂರು ರೂಪಾಯಿಗೆ ಮಿರದ ಬಂದು ಜುರ್ಮಾನೆ ಮೂಲಕವಾಗಲೀ, ಅಥವಾ ಈ ಎರಡರ ಮೂಲಕವಾಗಲಿ, ಮತ್ತು

(ii) ಎರಡನೇ ಅಥವಾ ಹಾಸ್ತಿದಫಾ ತಪ್ಪು ಸಾಬೀತಾದಾಗ, ಆರು ತಿಂಗಳಿಗೆ ಮಿರದ ಬಂದು ವಾಯಿದೆಯ ಪರ್ಯಂತ ಖೈದಿನ ಮೂಲಕವಾಗಲಿ, ಒಂದು ಸಾವಿರ ರೂಪಾಯಿಗೆ ಮಿರದ ಬಂದು ಜುರ್ಮಾನೆ ಮೂಲಕವಾಗಲಿ, ಅಥವಾ ಇವೆರಡರ ಮೂಲಕವಾಗಲಿ ಶಿಕ್ಷಿಸಬಹುದು.

(2) ಯಾವ ವಿಷಪದಾರ್ಥದ ಸಂಬಂಧವಾಗಿ ಈ ಪ್ರಕರಣಕ್ಕೆ ಒಳಪಡುವ ತಕ್ಸೀರು ನಡೆಯುತ್ತದೆಯೋ ಆ ವಿಷಪದಾರ್ಥವನ್ನು, ಅದು ಯಾವ ಪಾತ್ರೆಗಳಲ್ಲಿ, ಬಸ್ತು ಯಾ ಪೊಟ್ಣಗಳಲ್ಲಿ ಸಿಕ್ಕುತ್ತದೆಯೋ ಅಂಥಾ ಪಾತ್ರೆ ವಗೈರೆಗಳ ಸಮೇತವೂ, ತ್ತು (1) ನೇ ಒಳಪ್ರಕರಣದ (b) ಕಲಮಿನಲ್ಲಾಗಲೀ (c) ಕಲಮಿನಲ್ಲಾಗಲೀ ನಮೂದಿಸಿರುವ ತಕ್ಸೀರು ನಡೆದಿದ್ದ ಪಕ್ಷದಲ್ಲಿ ಆದರೀ ವಿಷಪದಾರ್ಥವನ್ನು ಸಾಗಿಸುವುದಕ್ಕೆ ಉಪಯೋಗಿಸಿದ ಯಾವದಾದರೂ ಪ್ರಾಣಿ ಮತ್ತು ಬಂಡಿ ವಗೈರೆ ವಾಹನಗಳ ತವೂ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಝಡ್ತಿ ವಾರಂಟ್ ಕೊಡಲು ಅಧಿಕಾರ.

8. (1) ಯಾವ ಸ್ಥಳದಲ್ಲಿ, ಯಾವುದಾದರೂ ವಿಷಪದಾರ್ಥವು ಈ ರೆಗ್ಯುಲೇಷನಿಗೆ ಅಥವಾ ಇದಕ್ಕನುಸಾರವಾಗಿ ಏ ನಿಬಂಧನೆಗಳಿಗೆ ವಿರೋಧವಾಗಿ ಯಾರ ಸ್ವಾಧೀನದಲ್ಲಾದರೂ ಇದೆಯೆ ಅಥವಾ ಯಾರಿಂದಲಾದರೂ ಬಿಕರಿಯಾಗುತ್ತಿದೆಯೆಂದಾಗಲೀ ಅಥವಾ ಈ ರೆಗ್ಯು ಲೇಷ್ ಮೇರೆಗೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದಾದ ಯಾವುದಾದರೂ ವಿಷಪದಾರ್ಥವು ಇಡಲ್ಪಟ್ಟಿದೆಯೆಂದಾಗಲೀ ಅಥವಾ ಬಚ್ಚಿಡಲ್ಪಟ್ಟಿದೆಯೆಂದಾಗಲೀ ಪೋಲೀಸು ಇನ್ಸ್‌ಪೆಕ್ಟರ್ ಜನರಲ್‌ರವರು, ಅಥವಾ ಡಿಸ್ಟ್ರಿಕ್ಟ್ ಮೇಜಸ್ಟ್ರೇಟ್‌ರವರು, ಅಥವಾ ಸಬ್ ಡಿವಿಜನಲ್ ಮೇಜಿಸ್ಟ್ರೇಟ್‌ರವರು ನಂಬುವುದಕ್ಕೆ ಅಥವಾ ಗ್ರಹಿಸಲು ಪಡುವುದಕ್ಕೆ ಕಾರಣವುಂಟೋ ಅಂಥಾ ಸ್ಥಳದ ಝಡ್ತೀ ಬಗ್ಯೆ ಸದರೀಯವರು ವಾರಂಟ್ ಕೊಡಬಹುದು.

(2) ಮೇಲ್ಕಂಡ ವಾರಂಟನ್ನು ಯಾರ ಹೆಸರಿಗೆ ಕಳುಹಿಸಿರುತ್ತದೆಯೋ ಆತನು ಸದರೀ ವಾರಂಟಿನ ಪ್ರಕಾರ ಸದರೀ ಸ್ಥಳಕ್ಕೆ ಪ್ರವೇಶಿಸಿ ಝಡ್ತೀಮಾಡಬಹುದು. 1904ನೇ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಝಡ್ತೀವಾರಂಟುಗಳ ವಿಷಯವಾಗಿ ಏರ್ಪಡಿಸಿರುವ ನಿಯಮಗಳು ಕೂಡಿದವುಟ್ಟಿಗೂ ಈ ವಾರಂಟಿನ ಜಾರಿಗೆ ಅನ್ವಯಿಸುವುದಾಗಿ ಭಾವಿಸತಕ್ಕದ್ದು.

ನಿಬಂಧನೆಗಳು.

9. (1) ನಿಬಂಧನೆಗಳನ್ನು ಏರ್ಪಡಿಸುವ ವಿಷಯದಲ್ಲಿ ಈ ಮೊದಲೇ ಸರ್ಕಾರದವರಿಗೆ ಕೊಟ್ಟಿರುವ ಇತರ ಅಧಿಕಾರಗಳನ್ನು ಚಲಾಯಿಸುವುದಲ್ಲದೆ ಸರ್ಕಾರದವರು ಈ ರೆಗ್ಯುಲೇಷನಿನ ಉದ್ದೇಶಗಳನ್ನು ಸಾಮಾನ್ಯವಾಗಿ ಜಾರಿಗೆ ತರುವ ಬಗ್ಯೆ ನಿಬಂಧನೆಗಳನ್ನು ಏರ್ಪಡಿಸಬಹುದು.

(2) ನಿಬಂಧನೆಗಳನ್ನು ಏರ್ಪಡಿಸುವ ಬಗ್ಯೆ ಈ ರೆಗ್ಯುಲೇಷನಿನಲ್ಲಿ ಕೊಟ್ಟಿರುವ ಪ್ರತಿ ಅಧಿಕಾರವನ್ನೂ ಸದರೀ ನಿಬಂಧನೆಗಳನ್ನು ಮೊದಲು ಪ್ರಕಟಿಸಿ ಅನಂತರ ಏರ್ಪಡಿಸಬೇಕೆಂಬ ಷರತ್ತಿಗೆ ಒಳಪಟ್ಟು ಚಲಾಯಿಸಬೇಕು.

(3) ಈ ರೆಗ್ಯುಲೇಷನಿನ ಮೇರೆಗೆ ಸರ್ಕಾರದವರು ಏರ್ಪಡಿಸಬಹುದಾದ ಎಲ್ಲಾ ನಿಬಂಧನೆಗಳೂ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಬೇಕಲ್ಲದೆ ಹಾಗೆ ಪ್ರಕಟವಾದ ತರುವಾಯ ಈ ರೆಗ್ಯುಲೇಷನಿನಲ್ಲಿ ಏರ್ಪಡಿಸಿದ್ದರೆ ಹೇಗೋ ಹಾಗೆಯೇ ಜಾರಿಯಲ್ಲಿ ಬರಬೇಕು.

ವಿನಾಯಿತಿಗಳು.

10. (1) ಈ ರೆಗ್ಯುಲೇಷನಿನಲ್ಲಿಯಾಗಲಿ, ಇದಕ್ಕೆ ಅನುಗುಣವಾಗಿ ಕೊಟ್ಟ ಲೈಸೆನ್ಸಿನಲ್ಲಿಯಾಗಲಿ ಅಥವಾ ಈ ರೆಗ್ಯುಲೇಷನನ್ನು ಅನುಸರಿಸಿ ಮಾಡಿದ ನಿಬಂಧನೆಯಲ್ಲಾಗಲಿ ಇರುವ ಯಾವುದೊಂದು ಅಂಶವೂ, ಈ ಪ್ರಕರಣದ (2)ನೆ ಒಳಪ್ರಕರಣದಲ್ಲಿ ನಿಯಮ ಮಾಡಿರುವ ರೀತಿಯಲ್ಲಿ ಶಿವಾಯಿ ಮತ್ತಾವ ವಿಧವಾಗಿಯೂ, ಈ ಕೆಳಗೆ ನಮೂದಿರುವ ಜನರು ತಮ್ಮ ತಮ್ಮ ಕಸಬು ಯಾ ಕೆಲಸಗಳನ್ನು ನಡೆಸುವುದರಲ್ಲಿ ಪ್ರಾಮಾಣಿಕತನದಿಂದ ಮಾಡಿದ ಯಾವ ಕಾರ್ಯಕ್ಕಾಗಲಾಗಲೂ ಕೂಡದು ಅಥವಾ ಅಂಥಾ ಕಾರ್ಯಕ್ಕೆ ಬಾಧಕವನ್ನು ಉಂಟು ಮಾಡಲೂ ಕೂಡದು ;—

(a) ವೈದ್ಯ ಕಸಬು ಮಾಡತಕ್ಕವನು ಅಥವಾ ಪಶುವೈದ್ಯನನ್ನು ಮಾಡತಕ್ಕವನು ಅಥವಾ

(b) ಮೈಸೂರು ಸೀಮೆಯಲ್ಲಿ ಆಯಾಕಾಲದಲ್ಲಿ ಜಾರಿಯಲ್ಲಿರುವ ಕಾನೂ ಮೇರೆಗೆ ರಸಾಯನ ಶಾಸ್ತ್ರಜ್ಞರ (Chemist) ಕೆಲಸ ಮಾಡುವುದಕ್ಕಾಗಲಿ ಔಷಧ ವಿಕ್ರಯಿಸುವವರ (Druggist) ಕೆಲಸ ಮಾಡುವುದಕ್ಕಾಗಲಿ ಕ್ರಮವಾಗಿ ಯೋಗ್ಯತೆ ಪಡೆದವರು, ಅಥವಾ

(c) ಸಾಮಾನ್ಯವೈದ್ಯ ಅಥವಾ ಪಶುವೈದ್ಯ ಮಾಡುವವರು ವಿಧಿಸುವ ಮೇರೆಗೆ ಔಷಧಕೊಡುವ ಅಥವಾ ಔಷಧವನ್ನು ಸೇರಿಸಿ ತಯಾರು ಮಾಡಿಕೊಡುವ ರಸಾಯನ ಶಾಸ್ತ್ರಜ್ಞರು (Chemist), ಔಷಧ ವಿಕ್ರಯ ಮಾಡುವವರು (Druggist) ಅಥವಾ ಕಾಂಪೌಂಡರು ಯಾನೆ ಪದಾರ್ಥಗಳನ್ನು ಸೇರಿಸಿ ಔಷಧ ಮಾಡುವವರು, ಅಥವಾ

(d) 5ನೆ ಪ್ರಕರಣದ ಮೇರೆಗೆ ಆಯಾ ಕಾಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳಿಗೆ ಒಳಪಟ್ಟು ಚರ್ಮಕ್ಕೆ ಹದ ಹಾಕುವವನು ಅಥವಾ ಚರ್ಮದ ವ್ಯಾಪಾರಿ ;

(2) ಈ ವಿಚಾರವಾಗಿ ಎಂದರೆ ನಿಬಂಧನೆಗಳನ್ನು ಏರ್ಪಡಿಸುವ ಬಗ್ಯೆ ಸರ್ಕಾರದವರು ನಮೂದಿಸುವ ಔಷಧ ಸಂಬಂಧ ವಿಷಪದಾರ್ಥಗಳನ್ನು ಮಾರಾಟಮಾಡುವ ಸಾಮಾನ್ಯ ವೈದ್ಯರ, ಅಥವಾ ಪಶುವೈದ್ಯರ ಅಥವಾ ಕೆಮಿಸ್ಟ್ ಅಥವಾ ಡ್ರಗ್ಗಿಸ್ಟ್‌ಗಳ ವಿಷಯದಲ್ಲಿ

(i) ಅಂಥಾ ಯಾವುದಾದರೂ ವಿಷಪದಾರ್ಥಗಳನ್ನು ವಿಕ್ರಯ ಮಾಡುವವರು ಮಾರಾಟ ಮಾಡಿದ ಸಾಮಾನುಗಳ ರಿಜಿಸ್ಟರು ಇಡುವ ಬಗ್ಯೆ, ಸದರಿ ರಿಜಿಸ್ಟರಿನಲ್ಲಿ ದಾಖಲಾ ಡಬೇಕಾದ ತಪಶೀಲುಗಳ ವಿಷಯದಲ್ಲಿಯೂ ಮತ್ತು ಸದರಿ ರಿಜಿಸ್ಟರುಗಳ ಅಜಮಾಯಿಷಿ ಬಗ್ಯೆ,

(ii) ಅಂಥಾ ಪದಾರ್ಥಗಳನ್ನು ಬಂದೋಬಸ್ತಾಗಿ ಇಡುವ ಬಗ್ಯೆ, ಅವುಗಳನ್ನು ಮಾರುವ ಅಥವಾ ಮಾರುವುದಕ್ಕಾಗಿ ಸದರಿ ಪದಾರ್ಥಗಳನ್ನು ಇಟ್ಟಿರುವ ಪಾತ್ರೆಗಳು ಬಸ್ತುಗಳು ಅಥವಾ ಪೊಟ್ಣಗಳೂ—ಇವುಗಳ ಮೇಲೆ ಚೀಟಿಗಳನ್ನು ಅಂಟಿಸುವ ಬಗ್ಯೆ,

236

(iii) ಈ ಕಾರ್ಯಗಳನ್ನು ವಿಚಾರಣೆ ಮಾಡುವಾಗ್ಗೆ ಸಿಬ್ಬಂದಿಗಳನ್ನು ನಿರ್ವಾಟಕ್ಕಾಗಿ ಇಟ್ಟುಕೊಂಡಿರುವ ಅಫೀಮು ಗಳನ್ನು ಅಜನಮೂನಿಷಿ ಮಾಡಿ ಪರೀಕ್ಷಿಸುವ ಬಗ್ಗೆ.

ಸರ್ಕಾರದವರು ನಿಬಂಧನೆಗಳನ್ನು ಏರ್ಪಡಿಸಬಹುದು

(5) ಈ ಹಿಂದೆ ಏನು ಹೇಳಿದ್ದಾಗ್ಯೂ ಸರ್ಕಾರದವರು ಸಾಮಾನ್ಯ ಅಥವಾ ವಿಶೇಷ ಹುಕುಂ ಕೊಟ್ಟು, ಈ ರೆಗ್ಯುಲೇಷನ್ನಿನ ಯಾವುದೇ ನಿಯಮಗಳಾಗಲಿ ಆ ಪೈಕಿ ಯಾವುದಾದರೂ ಒಂದು ನಿಯಮವಾಗಲಿ ಸದರಿ ಹುಕುಂನಲ್ಲಿ ವಿವರಿಸಿದ ಮಾಲಿನ ಅಥವಾ ಅಂಥಾ ಸಾಮಾನುಗಳ ತರಗತಿಗೆ, ಅಥವಾ ಹಾಗೆ ವಿವರಿಸಿರುವ ಯಾವುದಾದರೂ ಒಂದು ಉದ್ದೇಶಕ್ಕಾಗಿ ಉಪಯೋಗಿಸುವಂಥಾ ವಿಷಪದಾರ್ಥಕ್ಕೇ ಆಗಲಿ ಅಥವ ವಿಷಪದಾರ್ಥಗಳ ತರಗತಿಗೇ ಆಗಲಿ ಅನ್ವಯಿಸಕೂಡದೆಂದು ಅವರಿಗೆ ಯುಕ್ತವೆಂದು ತೋರುವಂತೆ ಪ್ರಕಟಿಸಬಹುದು; ಮತ್ತು ಅಂಥಾ ಪ್ರಕಟನೆಯನ್ನು ಆಗಿಂದಾಗ್ಗೆ ಬದಲಾಯಿಸಬಹುದು.

(6) ಈ ರೆಗ್ಯುಲೇಷನ್ನುಮೇರೆಗೆ ಸರ್ಕಾರದವರು ಮಾಡಬಹುದಾದ ಒಂದು ನಿಬಂಧನೆಯು ಫಲಾನಾ ವಿಷಪದಾರ್ಥ ಅಥವಾ ಪದಾರ್ಥಗಳ ವಿಷಯದಲ್ಲಿ ಫಲಾನಾ ಮನುಷ್ಯನಿಗೆ ಅಥವಾ ಫಲಾನಾ ತರಗತಿಯ ಮನುಷ್ಯರಿಗೆ ಲಗಾವಾಗಕೂಡದೆಂದು ನಮೂದಿಸಿ ಒಂದು ಸಾಮಾನ್ಯ ಅಥವ ವಿಶೇಷ ಹುಕುಮಿನ ಮೂಲಕ ಸರ್ಕಾರದವರು ವಿನಾಯಿತಿ ಕೊಡಬಹುದು.

ವಿಷಪದಾರ್ಥಗಳ ಬಿಲ್ಲು.

ಉದ್ದೇಶ ಮತ್ತು ಕಾರಣಗಳ ವಿವರಣೆ.

ಮೈಸೂರು ಸಂಸ್ಥಾನದಲ್ಲಿ ವಿಷಪದಾರ್ಥಗಳ ವ್ಯಾಪಾರವನ್ನೂ ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವದನ್ನೂ ಕಾನೂನು ಮೂಲಕ ಹತೋಟಿಯಲ್ಲಿಟ್ಟುಕೊಳ್ಳುವ ವಿಷಯವು 1894ನೆ ಇಸವಿಯು ಲಾಗಾಯಿತು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಬೊಂಬಾಯಿ ಆಧಿಪತ್ಯದಲ್ಲಿ ವಿಷಪದಾರ್ಥಗಳ ವ್ಯಾಪಾರವನ್ನೂ ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದನ್ನೂ ಕ್ರಮ ಪಡಿಸಿ ಹತೋಟಿಯಲ್ಲಿಟ್ಟುಕೊಳ್ಳುವಬಗ್ಗೆ ವಿಧಿಸಿರುವ 1-86ನೆ ಇಸವಿಯ VIIನೆ ನಂಬರ್ ಬೊಂಬಾಯಿಯ ಖಾನೂನನ್ನು ವಿಷ ಹಾಕಿ ತಕ್ಕೀರು ನಡೆಸುವದನ್ನು ನಿಲ್ಲಿಸುವುದಕ್ಕಾಗಿ ಬೆಂಗಳೂರು ಪಟ್ಟಣದಲ್ಲಿ ಜಾರಿಗೆ ತರಬೇಕೆಂದು 18[illegible]ನೆ ಇಸವಿಯಲ್ಲಿ ಸರ್ಕಾರಕ್ಕೆ ಸಲಹೆ ಬಂದಿತ್ತು. ಈ ವಿಷಯದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅಭಿಪ್ರಾಯವನ್ನೂ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್‌ರವರ ಅಭಿಪ್ರಾಯವನ್ನೂ ಕೇಳಲಾಯಿತು. ಆದರೆ ಸದರಿ ಬೊಂಬಾಯಿ ಆಕ್ಟಿನಲ್ಲಿಯೂ ಅದರ ವ್ಯಾಪನೆಯಲ್ಲಿಯೂ ನ್ಯೂನತೆಗಳಿದ್ದುದರಿಂದ ಅದರಿಂದ ಪ್ರಯೋಜನವೇನೂ ಆಗಲಿಲ್ಲ; ಅದೂ ಅಲ್ಲದೆ, ಈ ವಿಷಯವು ಆಗಲೂ ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಆದುದರಿಂದ ತಮಾಂ ಇಂಡಿಯಾದೇಶಕ್ಕೇ ಆಗಲಿ ಸಂದರ್ಭಾನುಸಾರವಾಗಿ ಯಾವುದಾದರೂ ಫಲಾನಾ ಸ್ಥಳಗಳಿಗಾಗಲಿ ಅನ್ವಯಿಸುವಂತೆ ಇಂಡಿಯಾ ಸರ್ಕಾರದವರು ಒಂದು ಆಕ್ಟನ್ನು ಪಾಸುಮಾಡುವವರೆಗೂ ಈ ವಿಷಯದಲ್ಲಿ ಮೈಸೂರು ಸರ್ಕಾರದವರು ಯಾವ ಅಮಲನ್ನೂ ನಡೆಸುವ ಅವಶ್ಯಕವಿಲ್ಲವೆಂದು ಯೋಚಿಸಿದ್ದರು.

2. ಈ ವಿಷಯದಲ್ಲಿ ಇಂಡಿಯಾ ಸರ್ಕಾರದವರು 1904ನೆ ಇಸವಿಯ 1ನೆ ನಂಬರ್ ಸಾಯಿಸನ್ಸ್ ಆಫ್ ವಿಷಪದಾರ್ಥಗಳಿಗೆ ಸಂಬಂಧಪಟ್ಟ ಆಕ್ಟ್ [illegible]ಮಾಡಿ ಅದಕ್ಕೆ ಅನುಗುಣವಾಗಿ ನಿಬಂಧನೆಗಳನ್ನೂ ಕೂಡಾ ಆಯಾ ಸ್ಥಳೀಯ ಸರ್ಕಾರಗಳಲ್ಲಿ ಏರ್ಪಟ್ಟುವೆ. ಆದಕಾರಣ [illegible] ಕಾನೂನನ್ನು ಈ ಸೀಮೆಯಲ್ಲಿಯೂ ಜಾರಿಗೆ ತರುವದು ಯುಕ್ತವೆಂದು ಈಗ ಆಲೋಚಿಸೋಣವಾಗಿದೆ.

3. ಈ ಬಿಲ್ಲಿನಲ್ಲಿ ಪ್ರಥಮತಃ ಮ್ಯುನಿಸಿಪಲ್ ಸ್ಥಳಹದ್ದಿನೊಳಗೆ ವಿಷಪದಾರ್ಥಗಳ ಬಿಕರಿಯನ್ನು ಹತೋಟಿಯಲ್ಲಿಟ್ಟುಕೊಂಡಿರುವುದಕ್ಕೆ (2ನೆ ಕಲಂನಲ್ಲಿ ಅವಕಾಶ ಉಂಟುಮಾಡಿರುತ್ತಾ ಇದರಲ್ಲಿ (3ನೆ ಕಲಂನಲ್ಲಿ) ಈ ದೇಶಕ್ಕೆ ಇಲೀ ಪಾಷಾಣವನ್ನು (White arsenic) ಲೈಸೆನ್ಸು ವಿನಾ ಇತರ ದೇಶಗಳಿಂದ ತರಿಸಿಕೊಳ್ಳಕೂಡದೆಂತಲೂ ಸಹಾ ನಿರೋಧಿಸಿ ಇರುತ್ತದೆ. ಮತ್ತು (4 ಮತ್ತು 5ನೆ ಕಲಂಗಳಲ್ಲಿ ಈ ಸಂಸ್ಥಾನದ ಎಲ್ಲಾ ಕಡೆಗಳಲ್ಲಾಗಲಿ ಅಥವಾ ಒಂದು ಭಾಗದಲ್ಲಾಗಲಿ ಈ ವಿಷಪದಾರ್ಥದ ಬಿಕರಿ ವಿಷಯವನ್ನು ಕ್ರಮ ಪಡಿಸುವುದಕ್ಕೂ, ಮತ್ತು, ಈ ವಿಷಪದಾರ್ಥದ ಮೂಲಕ ಖೂನಿ ನಡೆಸುವದೂ ಅಥವಾ ಜನಗಳಿಗೆ ವಿಷಹಾಕಿ ಹಾನಿಯುಂಟು ಮಾಡುವುದೂ ಯಾವ ಪ್ರದೇಶದಲ್ಲಿ ಪದೇಪದೇ ನಡೆಯುತ್ತಾ ಇದೆಯೋ ಅಂಥಾ ಪ್ರದೇಶದಲ್ಲಿ ಈ ವಿಷಪದಾರ್ಥಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದನ್ನು ವಿಚಾರ ಕ್ರಮಪಡಿಸುವುದಕ್ಕೂ ಸರ್ಕಾರದವರಿಗೆ ಅಧಿಕಾರವನ್ನು ಕೊಟ್ಟಿರುತ್ತದೆ. ಇದೂ ಅಲ್ಲದೆ ತಕಶೀರುಕರವಾದ [illegible]ಗಳಿಗೆ ಇಲೀ ಪಾಷಾಣಕ್ಕೆ ಬದಲಾಗಿ ಇತರ ಪಾಷಾಣಗಳನ್ನು ಉಪಯೋಗಿಸಲಾರಂಭಿಸಿದ್ದಾರೆಂದು ಕಂಡುಬಂದಾಗ ತತ್ಪ್ರತಿಕಾರ ಪರಿಹಾರಕ್ಕಾಗಿ ಈ ಇಲೀ ಪಾಷಾಣಕ್ಕೆ ಅನ್ಯಯಿಸುವ ನಿಯಮಗಳನ್ನೇ ಇತರ ಪಾಷಾಣಗಳಿಗೂ ಅನ್ವಯಿಸಿಕೊಳ್ಳುವದಕ್ಕೆ (10ನೆ ಕಲಂನಲ್ಲಿ) ಸರ್ಕಾರದವರಿಗೆ ಅಧಿಕಾರವಿದೆ. ರಸಾಯನ ಶಾಸ್ತ್ರಜ್ಞರು (Chemists) ಮತ್ತು ಔಷಧಗಳನ್ನು ತಯಾರುಮಾಡುವವರು ಕೆಲವು ವಿಷಪದಾರ್ಥಗಳನ್ನು ತಮ್ಮ ತಮ್ಮ ಅಂಗಡಿಗಳಲ್ಲಿಟ್ಟುಕೊಂಡು ಮಾರುವ ವಿಚಾರದಲ್ಲಿ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕಾಗಿ [illegible]ರವರು ವಿಧಿಸಬಹುದಾದ ನಿಬಂಧನೆಗಳಿಗೆ ಒಳಪಟ್ಟು, ವೈದ್ಯ ವೃತ್ತಿಯನ್ನು ಅವಲಂಬಿಸಿರುವರೂ, ರಸಾಯನ ಶಾಸ್ತ್ರಜ್ಞರೂ ಮತ್ತು ಇತರರೂ ತಮ್ಮ ತಮ್ಮ ಕೆಲಸಗಳನ್ನು ನಡೆಸುವದರಲ್ಲಿ ವಿಷಪದಾರ್ಥಗಳನ್ನು ಪ್ರಾಮಾಣಿಕತೆಯಿಂದ ಉಪಯೋಗಿಸಲು [illegible]ಕಾದ ಸಂದರ್ಭಗಳಲ್ಲಿ ಹಾಗೆ ಅವುಗಳನ್ನು ಉಪಯೋಗಿಸಲು (10ನೆ ಕಲಂನಲ್ಲಿ) ಅವಕಾಶ ಕೊಟ್ಟಿರುತ್ತದೆ